# ‘ಕಾವ್ಯಾನಂದ’ರ ಕಾವ್ಯ

## ಒಂದು ಅವಲೋಕನ

ವೃಷಭೇಂದ್ರ ಅರ್ಕಸಾಲಿ

ಸಂಕ್ರಮಣ ಪ್ರಕಾಶನ ಧಾರವಾಡ

# 'ಕಾವ್ಯಾನಂದ'ರ ಕಾವ್ಯ

## ಒಂದು ಅವಲೋಕನ

ವೃಷಭೇಂದ್ರ ಅರ್ಕಸಾಲಿ

೧೯೮೭

ಸಂಕ್ರಮಣ ಪ್ರಕಾಶನ ಧಾರವಾಡ

ಯದಲ್ಲಿ
ದ ಅರ್ಥ
ಕಾಶನವು
ವ್ಯಾಪಕ
ಬ ಹೆಬ್ಬಿ

ದಿಂದಲೇ
ರಚಿಸಿದ
ಶೀಲತೆಯ
ು ಬರೆದ
ಡುತ್ತಿರು
ವಾಗಿದೆ.

ತ್ತ ಶ್ರೀ
ಟ್ಟಿ ಚಂದನ
ನ ಆಭಾರಿ

KAVYANANDARA KAVYA (A Critical Appraisal of the Poetry of Dr. Siddayya Puranik, 'Kavyananda') : by Vrishabhendra Arkasali, Lecturer in Kannada, S. E. S. College, Sondur, Dt. Bellary ; Published by Sankramana Prakashana, Dharwad-580008 ; 1987 ; Price Rs. 7-00

ಪ್ರಕಾಶನ :

**ಸಂಕ್ರಮಣ ಪ್ರಕಾಶನ**
ಧಾರವಾಡ-೫೮೦೦೦೮
ಕರ್ನಾಟಕ

ಮುದ್ರಣ :

**ಚಂದನ ಮುದ್ರಣ**
ಬೆಳಗಾವಿ ನಾಕಾ ಹತ್ತಿರ
ಮಹಾಂತೇಶ ನಗರ
ಧಾರವಾಡ-೫೮೦೦೦೮

ಬೆಲೆ ; **ಏಳು ರೂಪಾಯಿಗಳು**

## ಪ್ರಕಾಶಕರ ಮಾತು

ಕಳೆದ ಎರಡೂವರೆ ದಶಕಗಳಿಂದಲೂ ಕನ್ನಡದ ಸಾಹಿತ್ಯ ವಲಯದಲ್ಲಿ ಸಾಹಿತ್ಯಿಕ ಪತ್ರಿಕೆ ಹಾಗೂ ಇತರ ಪ್ರಕಟಣೆಗಳ ಮೂಲಕ ತನ್ನದೇ ಆದ ಅರ್ಥ ಪೂರ್ಣ ರೀತಿಯಲ್ಲಿ ಕೆಲಸ ಮಾಡುತ್ತಿರುವ **ಸಂಕ್ರಮಣ ಪ್ರಕಾಶನ**ವು ಇನ್ನು ಮುಂದೆ ಪತ್ರಿಕೆಯೊಂದಿಗೆ ಪುಸ್ತಕ ಪ್ರಕಟನೆ ಕಾರ್ಯವನ್ನೂ ವ್ಯಾಪಕ ವಾಗಿ ಹಬ್ಬಿಸಿಕೊಳ್ಳುವ ಯೋಜನೆ ಹಾಕಿಕೊಂಡಿದೆ. ನಾಡಿನ ತುಂಬ ಹಬ್ಬಿ ರುವ ಸಂಕ್ರಮಣ ಬಳಗದ ಬಳ್ಳಿಯೇ ಇಂಥ ಯೋಜನೆಗೆ ಆಧಾರ.

ಆಧುನಿಕ ಕನ್ನಡ ಕಾವ್ಯದ ಅನೇಕ ಮಜಲುಗಳನ್ನು ದೂರದಿಂದಲೇ ಅವಲೋಕಿಸಿ, ಅವೆಲ್ಲವುಗಳ ಸಾರ ಹೀರಿಕೊಂಡು ಸಮರ್ಥ ಕಾವ್ಯ ರಚಿಸಿದ ಡಾ॥ ಸಿದ್ಧಯ್ಯ ಪುರಾಣಿಕ, 'ಕಾವ್ಯಾನಂದ', ಇವರ ಸೃಜನಶೀಲತೆಯ ಮೂಲ ಆಶಯಗಳ ಬಗ್ಗೆ ಶ್ರೀ ವೃಷಭೇಂದ್ರ ಅರ್ಕಸಾಲಿ ಅವರು ಬರೆದ ದೀರ್ಘ ಪ್ರಬಂಧವನ್ನು ಈ ಪುಸ್ತಕದ ರೂಪದಲ್ಲಿ ನಿಮ್ಮ ಮುಂದೆ ಇಡುತ್ತಿರು ವುದು, ಸಂಕ್ರಮಣ ಪ್ರಕಾಶನಕ್ಕೆ ಹೆಮ್ಮೆ ಹಾಗೂ ಪ್ರೀತಿಯ ವಿಷಯವಾಗಿದೆ.

ಪ್ರಕಾಶನದಲ್ಲಿ ಇದನ್ನು ಹೊರತರಲು ಅನುಮತಿ ಇತ್ತ ಶ್ರೀ ವೃಷಭೇಂದ್ರ ಅರ್ಕಸಾಲಿ ಅವರಿಗೂ, ಚಂದಾಗಿ ಮುದ್ರಿಸಿ ಕೊಟ್ಟ ಚಂದನ ಮುದ್ರಣದ ಶ್ರೀ ನಟರಾಜ ಗೌರಿಕೆರೆಮಠ ಅವರಿಗೂ ಪ್ರಕಾಶನ ಆಭಾರಿ ಯಾಗಿದೆ.

ಪ್ರಸ್ತಾವನೆ ೫
ಸಾಮಾಜಿಕ ವಾಸ್ತವಿಕತೆಯ ಚಿತ್ರಣ ೧೧
ರಾಜಕಾರಣ ವಿಮರ್ಶೆ ೧೬
ಶೋಷಕ ವರ್ಗ ವಿಡಂಬನೆ ೨೦
ಧಾರ್ಮಿಕ ಶೋಷಣೆಯ ಚಿತ್ರಣ ೨೨
ಶೋಷಿತ ಪರ ನಿಲುವು ೨೫
ಮಾನವತೆ ೨೭
ಸಮತಾ ತತ್ವ ೨೯
ಸಾಮಾಜಿಕ ಕ್ರಾಂತಿ ೩೩

# ಪ್ರಸ್ತಾವನೆ

ಕಾವ್ಯಕ್ಕಾಗಿ ಕಾವ್ಯ ಎಂಬ ಸ್ವರತಿ ಸಂಪ್ರೀತ ಸೂತ್ರವನ್ನು ಒಂದು ಕಡೆ ಸರಿಸಿ ಬದುಕಿಗಾಗಿ ಕಾವ್ಯ – ಸಮಾಜಕ್ಕಾಗಿ ಕಾವ್ಯ ಎಂಬ ನಿಜವಾದ ದೃಷ್ಟಿಯಿಂದ ನೋಡಿದರೆ ಆಧುನಿಕ ಕನ್ನಡ ಕಾವ್ಯದಲ್ಲಿ ಎದ್ದು ಕಾಣುವಂಥ ಕವಿ 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಸುಪರಿಚಿತರಾಗಿರುವ ಸಿದ್ಧಯ್ಯ ಪುರಾಣಿಕರು. ಕುವೆಂಪು, ಬೇಂದ್ರೆ ಮುಂತಾದವರಲ್ಲಿ ಅಂಶತಃ ಕಾಣಬರುವ ಸಾಮಾಜಿಕ ಪ್ರಜ್ಞೆಯು ಸಾಕಷ್ಟು ಸಮಗ್ರ ಪರಿಮಾಣದಲ್ಲಿ ಸಿದ್ಧಿಪಡೆದುದು ಸಿದ್ಧಯ್ಯನವರ ಕಾವ್ಯದಲ್ಲಿ. ಸಾಮಾಜಿಕ ಪ್ರಜ್ಞೆಯ ಆಧಾರದ ಮೇಲೆ ತಮ್ಮ ಕಾವ್ಯಸೌಧವನ್ನು ಕಟ್ಟಿದ ಕನ್ನಡದ ಆಧುನಿಕ ಕವಿಗಳಲ್ಲಿ ಕಾವ್ಯಾನಂದರಿಗೆ ಅಗ್ರಮಾನ್ಯ ಸ್ಥಾನ ಸಲ್ಲಬೇಕು.

ವ್ಯಕ್ತಿಯ ಸಿದ್ಧಿಯು ಸಮಾಜದ ಅಂತಸ್ಸತ್ವದೊಡನೆ ತಾದಾತ್ಮ್ಯ ಪಡೆಯುವುದರಿಂದ ಮತ್ತು ಸಮಾಜದ ಸಮಗ್ರ ಕಲ್ಯಾಣದೆಡೆಗೆ ಸತತವೂ ದುಡಿಯುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಕವಿಯೂ ಹೀಗೆಯೇ ಸಾರ್ಥಕತೆಯನ್ನು ಪಡೆಯುತ್ತಾನೆ. ಅಂಥ ಸಾರ್ಥಕ ಬದುಕನ್ನು ನಡೆದವರು, ಹಾಗೂ ಅದನ್ನೇ ನುಡಿಯಲ್ಲೂ ಅಭಿವ್ಯಕ್ತ ಮಾಡಿದವರು ಕಾವ್ಯಾನಂದ.

ರಕ್ತಗತವಾಗಿಯೂ ಸಂಸ್ಕಾರಗತವಾಗಿಯೂ ಸಾಹಿತ್ಯ- ಸಹೃದಯತೆಗಳ ಮನೆಯಲ್ಲಿ ಹುಟ್ಟಿ ಬೆಳೆದ ಅವರಿಗೆ ಬಡತನ – ಬದುಕಿನ ಕಾಠಿಣ್ಯಗಳ ಮೂಸೆಯಲ್ಲಿ ತಮ್ಮ ವ್ಯಕ್ತಿತ್ವಚಿನ್ನವನ್ನು ಪುಟಕ್ಕಿಡುವಂಥ ಹಿನ್ನೆಲೆಯು ದೊರಕಿದ್ದುದು ಸಮಾಜದ ತಳಹದಿಯ ಸ್ತರವನ್ನು ಎಂದೆಂದೂ ಮರೆಯದಂಥ ರೀತಿಯಲ್ಲಿ ಅವರ ಮನೋಧರ್ಮ ರೂಪಿತವಾಗಲು ಅನುಕೂಲವಾಯಿತು. ಬುದ್ಧಿಮತ್ತೆಯಲ್ಲಿ ಉತ್ತಮ ಮಟ್ಟದ ಬಳುವಳಿ ಪಡೆದಿದ್ದ ಅವರ ಧೀಶಕ್ತಿಯು ಕನ್ನಡ, ಇಂಗ್ಲೀಷ್, ಉರ್ದೂ ಸಾಹಿತ್ಯಗಳೆಲ್ಲವುಗಳಿಂದ ಸಾರವನ್ನು ಹೀರಿ ಸಮಾಜಸೇವೆಗೆ ಅಣಿಯಾಯಿತು.

ಸಾಮಾಜಿಕ ಚಿಂತನೆ, ಅಧ್ಯಾತ್ಮಿಕ ಚಿಂತನೆ ಹಾಗೂ ಕಾವ್ಯಚಿಂತನೆ ಈ ಮೂರೂ ಮುಪ್ಪುರಿಗೊಂಡ ಅವರ ಚೈತನ್ಯವು ಆಡಳಿತಾಧಿಕಾರಿಯಾಗಿದ್ದೂ

ಕಾವ್ಯಕೃಷಿಯನ್ನು ಮರೆಯುವಂತೆ, ಜೀವನ - ಲೇಖನಗಳಲ್ಲಿ ಅಭಿನ್ನತೆಯನ್ನು ಸಾಧಿಸಲು ಸಾಧ್ಯವಾಗಿರುವುದೊಂದು ವಿಶೇಷ. ಈ ಗುಣ ವಿಶೇಷವು ಹನ್ನೆರಡನೆಯ ಶತಮಾನದ ಬಸವಣ್ಣನ ಮನೋಧರ್ಮವನ್ನು ನೆನಪಿಸುವಂತಿದೆ. ಕಾವ್ಯಾನಂದರ ಕಾವ್ಯದ ಮೇಲೆ ವಚನ ಸಾಹಿತ್ಯದ ಪ್ರಭಾವ ಎದ್ದು ಕಾಣುತ್ತದೆ. ಅವರ ಕಾವ್ಯವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಆ ಶರಣರ ಸಾಮಾಜಿಕ ಕ್ರಾಂತಿಯನ್ನೂ ಸಾಹಿತ್ಯಿಕ ಪರಂಪರೆಯನ್ನೂ ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಭೌತಿಕವಾಗಿ ಸಮಾಜದ ಕೆಳಸ್ತರದ ಜನರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಬದಲಾವಣೆಯೊಡನೆ ಆಧ್ಯಾತ್ಮಿಕವಾಗಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹಾಗೂ ಸಮಾಜದ ಕಲ್ಯಾಣಗಳನ್ನು ಏಕಕಾಲಕ್ಕೆ ಸಾಧಿಸಲು ಅನುಕೂಲವಾಗುವಂಥ ರೀತಿಯು ಬಸವಾದಿ ಶರಣರ ಕ್ರಾಂತಿಯು ಮಾನವನ ಸಮಗ್ರ ಆಯಾಮಗಳನ್ನು ಒಳಗೊಳ್ಳುವಂಥ ವಿಶಾಲ ದೃಷ್ಟಿಯದು. ಅಂದಿನ ಕಾಲಮಾನದ ಹಿನ್ನೆಲೆಯಲ್ಲಿ ಅವರ ಅಳವಿಗೆ ಸಿಗುವ ಎಲ್ಲ ಜ್ಞಾನಸಂಪತ್ತಿನ ಮಂಥನದ ಮೂಲಕ ಒಂದು ವಿಚಾರ ಪ್ರಣಾಳಿಕೆಯನ್ನೂ ಒಂದು ಆಚರಣಾವಿಧಾನವನ್ನೂ ರೂಪಿಸಿ ಕೊಟ್ಟರು. ಅವರ ಮಾರ್ಗವಿಧಾನಗಳ ಹಿಂದಿರುವ ಸಾರಮೂಲ ದೃಷ್ಟಿ(spirit)ಯನ್ನು ಇಂದಿನ ವೈಜ್ಞಾನಿಕ ಯುಗಕ್ಕೆ ಅಳವಡಿಸಿಕೊಡುವುದರಲ್ಲಿ ಬಹಳಷ್ಟು ಉಪಯೋಗ ಇದೆ.

ಇಂಥ ಆಧುನಿಕ ಮೌಲ್ಯಗಳನ್ನು ತಮ್ಮ ಕಾವ್ಯ ಕರ್ಮದ ಮೂಲಕ ಕಂಡುಕೊಳ್ಳಲು ಕಾವ್ಯಾನಂದರು ಪ್ರಯತ್ನಿಸಿದ್ದಾರೆ. ಅದರಲ್ಲಿ ಸಾರ್ಥಕತೆಯನ್ನೂ ಸಾಧಿಸಿದ್ದಾರೆ. ಪರಂಪರೆಯ ಶ್ರೇಷ್ಠ ಅಂಶಗಳಲ್ಲಿ ಬೇರನ್ನಿಳಿಸಿ ಇಂದಿನ ಅವಶ್ಯಕತೆ ಮತ್ತು ಅನುಕೂಲತೆಗಳಿಗೆ ತಕ್ಕಂತೆ ಸಮಕಾಲೀನ ಪ್ರಜ್ಞೆಯ ಪುಷ್ಟಿಹೊಂದಿದ ಕಾಂಡಗಳನ್ನು ಬೆಳೆಸಿಕೊಂಡು ನಾಳಿನ ಆದರ್ಶದ ಹೂ ಹಣ್ಣುಗಳನ್ನು ಕೊಡುವಂಥ ಆರೋಗ್ಯಪೂರ್ಣವಾದ ಪ್ರಬುದ್ಧವೂ ಸಮೃದ್ಧ ಸುಂದರವೂ ಆದ ಕಾವ್ಯ ವೃಕ್ಷವನ್ನು ಕಾವ್ಯಾನಂದರು ಕನ್ನಡದ ಕಾವ್ಯತೋಟದಲ್ಲಿ ಬೆಳೆಸಿದ್ದಾರೆ.

ಅವರ ಕಾವ್ಯದಲ್ಲಿ "ಭಾವನೆಯ ವಾಯುವೇಗ, ಬುದ್ಧಿಯ ಅಗ್ನಿಗುಣ" ಹಾಗೂ ತತ್ವಗಳ ತೂಕ"೧ ಗಳನ್ನು ವರಕವಿ ಬೇಂದ್ರೆಯವರು ಅವರ ಮೊದಲ



ಕವನ ಸಂಕಲನ 'ಜಲಪಾತ'ದಲ್ಲಿಯೇ ಗುರುತಿಸಿದ್ದರು. ಶ್ರೀ ಚೆನ್ನವೀರ ಕಣವಿಯವರು ಅವರ ಕಾವ್ಯಸಾಧನೆಯ ವೈಶಿಷ್ಟ್ಯವನ್ನು ಕುರಿತು "ಬದುಕಿನ ನೇರ ಸಂಪರ್ಕದೊಂದಿಗೆ ಪರಿಸರಕ್ಕೆ ತೋರುವ ಪ್ರತಿಕ್ರಿಯೆಯಲ್ಲಿ; ಹೃದಯದ ಆಳದಿಂದ ಹೊರಹೊಮ್ಮುವ ನಿವೇದನದಲ್ಲಿ ; ವಿಜ್ಞಾನವನ್ನೂ ತತ್ವಜ್ಞಾನವನ್ನೂ ಕವಿಹೃದಯದೊಂದಿಗೆ ಕಸಿಗೊಳಿಸಿ ಅನುಭಾವದ ಹೊಳಹು ಹಾಕುವಲ್ಲಿ ; ಯಾವ ಗಡಿ–ನುಡಿಯೂ ಅಡ್ಡಿತಾರದ ಮುಕ್ತಮಾನಸದಲ್ಲಿ ; ಲೋಕದ ಆಗುಹೋಗುಗಳ ವಿಮರ್ಶೆಯಲ್ಲಿ, ಆತ್ಮವಿಮರ್ಶೆಯಲ್ಲಿ, ತಾವು ನಂಬಿ ತಮ್ಮದಾಗಿಸಿಕೊಂಡುದರ ಗಟ್ಟಿತನದಲ್ಲಿ ಮತ್ತು ಅದರ ಚಿಂತನ ಲಹರಿಯಲ್ಲಿ ಹಾಗೂ ನುಡಿಯ ಬೆಡಗನ್ನು ಅರ್ಥವತ್ತಾಗಿ ಮೂಡಿಸುವಲ್ಲಿ ಸಿದ್ದಯ್ಯನವರು ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ" ೨ ಎಂದು ವಿಶ್ಲೇಷಿಸಿದ್ದಾರೆ.

ಸಮಕಾಲೀನ ಸಾಹಿತ್ಯಿಕ ಸಂದರ್ಭದಲ್ಲಿ ಕಾವ್ಯಾನಂದರ ಸ್ಥಾನವನ್ನು ಪರಿಶೀಲಿಸುವುದು ಸಕಾಲಿಕವಾಗಿದೆ. ಕಾವ್ಯಾನಂದರು ಕಾವ್ಯರಂಗ ಪ್ರವೇಶಿಸುವಾಗ ನವೋದಯವು ಹಿಂದಾಗುತ್ತಿದ್ದು ನವ್ಯದ ಗಾಳಿ ಬೀಸಲು ಪ್ರಾರಂಭವಾಗಿತ್ತು. ನವೋದಯದ ಏಕಾಂತಿಕ, ಆದರ್ಶಕ–ಅಲೌಕಿಕಾನುಭೂತಿಯ, ಪರಂಪರಾಶ್ರದ್ಧೆಯ, ರಮ್ಯ –ಕಲ್ಪನಾ ಪ್ರಧಾನದ ಕಾವ್ಯದಲ್ಲಿ ಬದುಕಿನ ವಾಸ್ತವತೆಯ ಮೇಲ್ಪದರಿನ ಹಾಗೂ ಆಂಶಿಕವಾದ ನಿರ್ವಹಣೆ ಮಾತ್ರ ಸಾಧ್ಯವಾಗಿತ್ತು. ಆದರೂ ಅದರ ಜನಪ್ರಿಯ ಅಂಶವನ್ನು ಅಲ್ಲಗಳೆಯುವಂತಿಲ್ಲ. ಆದರೆ ಸ್ವಾತಂತ್ರ್ಯೋತ್ತರ ಕಾಲದ ಬದಲಾದ ಪರಿಸರದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಅದು ನಿರುಪಯುಕ್ತವಾಯಿತು. ಅನುಭವದ ಪ್ರಾಮಾಣಿಕತೆಯ ಕಡೆಗೆ ಕಾವ್ಯವನ್ನು ಎಳೆದು ತರುವಲ್ಲಿ 'ನವ್ಯ'ವು ಸಫಲತೆಯನ್ನು ಸಾಧಿಸಿದರೂ ತನ್ನ ಬೌದ್ಧಿಕ ಕಸರತ್ತು, ತೀರಾ ವ್ಯಕ್ತಿಗತ ವಿಕೃತ ರೂಪಾಭಿವ್ಯಕ್ತಿ, ದುರೂಹತೆ, ಗುಂಪುಗಾರಿಕೆ ಮುಂತಾದ ಕಾರಣಗಳಿಂದ ಕಾವ್ಯವು ಜನವಿಮುಖವಾಗುವಂತೆ ಮಾಡಿತು. ಸಾಮಾಜಿಕ ಸಮಸ್ಯೆಗಳಿಗಂತೂ ಅದು ಸಂಬಂಧ ವಿಲ್ಲದಂತಿದ್ದು ವಿಷಾದ, ನಿರಾಶೆ, ಅಸಂಗತತೆ ಮುಂತಾದ ಧೋರಣೆಗಳನ್ನು ಎತ್ತಿಹಿಡಿಯಿತು.

ನವ್ಯದ ಮೆರವಣಿಗೆಯ ಸಂದರ್ಭದಲ್ಲಿ ಕುವೆಂಪುರಂಥವರೇ ಕವಿಗಳೇ ಅಲ್ಲ ಎನ್ನುವ ಮಟ್ಟಿಗೆ ಹಾಗೂ ಸಮನ್ವಯ ಧೋರಣೆಯ ಕಣವಿ,

ಶಿವರುದ್ರಪ್ಪ, ಕಾವ್ಯಾನಂದರಂಥ ಕವಿಗಳನ್ನು ಲೆಕ್ಕಕ್ಕೂ ಹಿಡಿಯುವಷ್ಟು ಮಟ್ಟಿಗೆ ವಿಮರ್ಶೆಯಲ್ಲಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಜಾತ್ಯಂಧತೆ ತೂರಿಕೊಂಡಿತು.

ಆದರೆ ಸಾಹಿತ್ಯ ಲೋಕದಲ್ಲಿ ಸಂಚಲನೆ ಹೆಚ್ಚಾಗಿ, ಜಾಗೃತಿ ಮೂಡುತ್ತ, ಕೆಳವರ್ಗದ ಜನರೂ ದನಿ ಎತ್ತತೊಡಗಿದಾಗ ನವ್ಯದ ಭಂಡವಾಳ ಬಯಲಾಗುತ್ತಬಂತು, ದಲಿತ ಕಾವ್ಯದ ಜೊತೆಗೆ ಬಂಡಾಯ ಕಾವ್ಯ ಚಳುವಳಿಯು ತಲೆದೋರಿದಾಗ ಒಟ್ಟಿನಲ್ಲಿ ಕಾವ್ಯ ವಿಮರ್ಶೆಯ ದೃಷ್ಟಿಕೋನವೇ ಬದಲಾಯಿತು. ಕಾವ್ಯವು ಸಮಾಜಪರವಾಯಿತು.

ಈ ಐತಿಹಾಸಿಕ ಹಿನ್ನೆಲೆಯಲ್ಲಿ ಕಾವ್ಯಾನಂದರ ಗದ್ದಲ ಮಾಡದ ಶ್ರದ್ಧೆಯ ಸಾಧನೆಯು ನಿಜಕ್ಕೂ ಪ್ರಶಂಶಾರ್ಹವಾದುದು. ನವ್ಯ ಚಳುವಳಿಯು ಕಣವಿ, ಶಿವರುದ್ರಪ್ಪ, ನರಸಿಂಹಸ್ವಾಮಿ, ವಿ. ಸೀ. ರಂಥ ಸಮನ್ವಯ ವಾದಿಗಳನ್ನೂ ತನ್ನ ಪ್ರಭಾವಕ್ಕೆ ಒಳಗು ಮಾಡಿಕೊಂಡಿತಾದರೂ ಕಾವ್ಯಾನಂದರನ್ನು ವಿಚಲಿತಗೊಳಿಸದೆ ಇದ್ದುದೊಂದು ಸೋಜಿಗ. ತಾವು ನಂಬಿದ್ದ ಮೌಲ್ಯಗಳಲ್ಲಿ ಅವರ ನಿಷ್ಠೆಯ ಗಾಢತೆ ಅದ್ಭುತವಾದುದು. ತಮ್ಮ ದಾರಿಯಲ್ಲೇ ಅವರು ಇನ್ನಷ್ಟು ಸೂಕ್ಷ್ಮತೆ ಮತ್ತು ಜನಪರತೆ ಯನ್ನು ಈ ಗೊಂದಲದ ನಡುವೆಯೇ ಸಾಧಿಸುವುದರಲ್ಲಿ ತೊಡಗಿದ್ದರು. ಆದರೆ ಮತೀಯ - ಜಾತೀಯ ಆಧಾರದ ಮೇಲೆ ಬೆಳೆಯುತ್ತಿರುವ ದಲಿತ - ಬಂಡಾಯದ ಸಂದರ್ಭದಲ್ಲಿಯೂ ಕಾವ್ಯಾನಂದರ ಕಾವ್ಯಕ್ಕೆ ಸಿಗಬೇಕಾದ ಮಾನ್ಯತೆ ಸಿಕ್ಕಿಲ್ಲವೆನಿಸುತ್ತದೆ.

ಕಾವ್ಯವೊಂದೇ ಅಲ್ಲದೆ ಕತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಪದಗಳು ಮುಂತಾದ ಪ್ರಕಾರಗಳಲ್ಲೂ ಕೃಷಿ ಮಾಡಿರುವ ಕಾವ್ಯಾನಂದರ ಸಾಹಿತ್ಯದಲ್ಲಿ ಎದ್ದು ಕಾಣುವಂತಹುದು ಕಾವ್ಯಸಾಧನೆಯೇ. ಜಲಪಾತ (೧೯೫೩), ಕರುಣಾ ಶ್ರಾವಣ (೧೯೫೫), ಮಾನಸ ಸರೋವರ (೧೯೫೯), ಕಲ್ಲೋಲ ಮಾಲೆ (೧೯೬೮). ಮೊದಲು ಮಾನವನಾಗು (೧೯೬೯), ವಚನೋದ್ಯಾನ (೧೯೭೭), ಹಾಗೂ ವಚನ ನಂದನ (೧೯೮೩) ಇವು ಇವರ ಕವನ ಸಂಕಲನಗಳು.



ಇವರ ಕಾವ್ಯದ ಸಮಗ್ರ ಅಧ್ಯಯನವು ಹಲವು ಮಹಾಪ್ರಬಂಧಗಳ ವ್ಯಾಪ್ತಿಗೆ ಅಳವಡುವಂತಿದೆ. ಆದರೆ ಸಾಮಾಜಿಕ ಪ್ರಜ್ಞೆಯ ನಿಲುವಿನಿಂದ ಮಾತ್ರ ಅವರ ಕಾವ್ಯವನ್ನು ಪರಿಚಯ ಮಾಡಿಕೊಡಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಏಕೆಂದರೆ ಅದು ಇಂದಿನ ವಿಮರ್ಶೆಯಲ್ಲಿ ಒಂದು ಪ್ರಧಾನ ಮೌಲ್ಯವಾಗಿದೆ.

ನವೋದಯ ಶೈಲಿಯಲ್ಲೇ ಮೊದಲು ಬರೆಯುತ್ತ ಬಂದ ಕಾವ್ಯಾನಂದ ರ ಕಾವ್ಯವನ್ನು ಇತರ ನವೋದಯ ಕವಿಗಳಿಂದ ಪ್ರತ್ಯೇಕಗೊಳಿಸುವುದು ಈ ಮೌಲ್ಯವೇ. ನಂತರದ ಹಂತದಲ್ಲಿ ವಚನ ಮಾಧ್ಯಮದಲ್ಲಿ ಅವರು ತಮ್ಮ ಸಿದ್ಧಿ ಯನ್ನು ಕಂಡುಕೊಂಡಿರುವುದನ್ನು ನೋಡಬಹುದು.

ಪ್ರಾರಂಭದ ಸಂಕಲನಗಳಲ್ಲಿ ನವೋದಯದ ವೈಶಿಷ್ಟ್ಯಗಳಾದ ಭಾವುಕತೆ, ಆದರ್ಶಪ್ರಿಯತೆ, ಆಧ್ಯಾತ್ಮಿಕತೆ, ಮಾಧುರ್ಯ, ಮಾರ್ದವತೆಗಳು ಎದ್ದು ಕಾಣು ವಂತಿವೆ. ಆದರೆ ಬಹಳ ನವೋದಯರಲ್ಲಿ ಸಾಮಾನ್ಯವಾಗಿ ಕಾಣುವ ಅಮರ ಪ್ರಣಯ ಪ್ರೇಮ, ಕೌಟುಂಬಿಕ ಕೋಮಲ ಭಾವಗಳ ಚಿತ್ರಣಗಳು ಇವರ ಕಾವ್ಯದಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ನವೋದಯರಲ್ಲಿ ಆಂಶಿಕವಾಗಿ ಕಾಣುವ ಸಾಮಾಜಿಕ ಪ್ರಜ್ಞೆಯು ಇವರಲ್ಲಿ ಪ್ರಾರಂಭದಿಂದಲೂ ಎದ್ದು ಕಾಣು ವುದೊಂದು ವಿಶೇಷ. ಮೊದಮೊದಲು ಕೇವಲ ಆದರ್ಶ ನಿರೂಪಕವೂ ಭಾವು ಕವೂ ಆಗಿದ್ದ ಈ ಪ್ರಜ್ಞೆಯು ಅವರ ವಚನಗಳಲ್ಲಿ ವಾಸ್ತವಿಕವೂ, ತಲಸ್ಪರ್ಶಿ- ಯೂ ಗಾಢವೂ ಆಗಿರುವುದು ಕಂಡು ಬರುತ್ತದೆ. ೩

ಸಾಮಾಜಿಕ ಪ್ರಜ್ಞೆಯಲ್ಲಿ ಇವರದು ತೀವ್ರವಾದ ಕಮ್ಯುನಿಜಮ್ಮಿಗಿಂತ ಅಹಿಂಸಾತ್ಮಕವೂ ಮನಃ ಪರಿವರ್ತನೆಯ ಮಾರ್ಗದ್ದೂ ಆದ ಮಾನವತಾವಾದ ವಾಗಿದೆ. ಆಧ್ಯಾತ್ಮಿಕತೆಯು ಇಲ್ಲಿಯ ನೆಲದ ಗುಣವೇ ಎಂಬಷ್ಟು ಪ್ರಮುಖಾಂಶ ವಾಗಿರುವ ನಮ್ಮ ದೇಶದ ಹಿನ್ನೆಲೆಯಲ್ಲಿ ಕಾವ್ಯಾನಂದರ ಈ ಧೋರಣೆಯು ಸುವರ್ಣ ಮಾಧ್ಯಮ ನಿಲುವಿನದಾಗಿದೆ.

"ತಂತ್ರಕ್ಕಿಂತ ತಿರುಳಿನೆಡೆಗೆ; ಮಂತ್ರಕ್ಕಿಂತ ಮರ್ಮದೆಡೆಗೆ, ಸ್ಪರ್ಧೆ ಗಿಂತ ಸಂಪನ್ನತೆಯ ಕಡೆಗೇ ಇವರ ಗಮನ ಹೆಚ್ಚು. ಅಂತೆಯೇ ಮೊದಲಿನಿಂದಲೂ ಇವರ ಕಾವ್ಯದಲ್ಲಿ ಸೌಂದರ್ಯ ಪ್ರಜ್ಞೆಯೊಡನೆ ಸಾಮಾಜಿಕ ಕಳಕಳಿ, ಬಡತನದ

"ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ
ಶೀಲ ಶೂನ್ಯತೆಯೇ ಸಭ್ಯತೆಯ ಉಡುಪುಟ್ಟಿದೆ
ಶೋಷಣೆಯೇ ಸೌಮ್ಯವಾದದ ಸೋಗು ಹಾಕಿದೆ
ಮೋಸವೇ ಲೇಸಿನ ಆಭಾಸ ಹುಟ್ಟಿಸಿದೆ
ಜಾತೀಯತೆ ರಾಷ್ಟ್ರೀಯತೆಗೆ ನಿಧಿ ಸಿದ್ಧಗೊಳಿಸುತ್ತಿದೆ
ಸ್ವೈರ ವೃತ್ತಿ ಸ್ವತಂತ್ರಕ್ಕೆ ಸಮಾಧಿ ಕಟ್ಟುತ್ತಿದೆ"

ಎಂದು ಮುಂತಾಗಿ ನೈತಿಕತೆಯ ಅಧೋಗತಿಯ ಬಗ್ಗೆ ಕಳವಳ ವ್ಯಕ್ತ ಮಾಡಿದ್ದಾರೆ.

ಇಂದಿನ ಸಮಾಜದ ಪರಿಸ್ಥಿತಿಯನ್ನು, ಸಮಾಜದ ಸಮಸ್ಯೆಗಳ ಹಿಂದಿರುವ ಹಾಗೂ ಹಿಂದಿನಿಂದಲೂ ಸಾಗಿಬಂದಿರುವ ಶೋಷಣೆಯ ಕರಾಳ ಕೈವಾಡವನ್ನು ಕಾವ್ಯಾನಂದರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಅದಕ್ಕೆ ಉತ್ತಮ ಕಾವ್ಯ ರೂಪವನ್ನು ಕೊಟ್ಟಿದ್ದಾರೆ. ಶೋಷಣೆಯ ಕ್ರೂರತೆಯನ್ನು 'ಕುರುಡಿ ತಕ್ಕಡಿ ತೂಗಿದಂತೆಯೂ,' ತೂಕ ತಪ್ಪಿ ಕುಣಿವ ಕಾಲಭೈರವನಂತೆಯೂ ಅವರು ಕಂಡಿದ್ದಾರೆ. ದುಷ್ಟವ್ಯವಸ್ಥೆಯುಳ್ಳ ಸಮಾಜವನ್ನು

"ರಂಗು ರಂಗಿನ ಬೆಡಗ ತೊಟ್ಟು ಜಗದಂಗಳದ
ರಂಗದಲಿ ವಿವಿಧ ಭಂಗಿಯಲ್ಲಿ ಜನ ಜಂಗುಳಿಯ
ಅಂಗಗಳ ತುಳಿ ತುಳಿದು ರಿಂಗಣ ಕುಣಿಯುತಿಹ
ಓ ಮನೋಹರಿ ಹೇ ಭಯಂಕರಿ
ಓ ರೂಪವತಿ ಎಲೆ ಪಾಪಮತಿ
ನಿರ್ಲಕ್ಷ್ಯ ನಿಷ್ಕರುಣಿ ಮಾನವ ಸಮಾಜ" [೬]

ಎಂದು ಅವರು ಬಣ್ಣಿಸುವುದರಲ್ಲಿ ಸಮಾಜದ ಮೇಲು ವರ್ಗಗಳ ಆಡಂಬರ ವೈಭವಗಳೂ ಅವುಗಳೊಳಗಿನ ಸ್ವಾರ್ಥಕ್ರೌರ್ಯಗಳೂ ಚೆನ್ನಾಗಿ ಪ್ರತಿಬಿಂಬಿತವಾಗಿವೆ.

"ತೂಗುತಲೆ ಬಂದಿರುವಿ ಯುಗ ಯುಗದಿ
ಮಾಡಿರುವರಾರು ನಿನ್ನ ತೂಕದ ನಿಗದಿ
ತೂಕ ಸರಿಯಿಲ್ಲೆನುವ ಕೆಚ್ಚ ತೋರಿದ ಕಲಿಗೆ



ಸಾಮಾನೆ ಸಿಗದಾಯ್ತು
ಉಪವಾಸ ಗತಿಯಾಯ್ತು" [೭]

—ಎಂದು ಅಸಮಾನತೆಯ ಆಧಾರದ ಮೇಲೆಯೇ ಯುಗಯುಗಗಳಿಂದಲೂ ಸಾಮಾಜಿಕ ವ್ಯವಸ್ಥೆಯು ನಡೆಯುತ್ತಾ, ಬಂದಿರುವ ಬಗೆಯನ್ನು ಪ್ರತಿಮಾತ್ಮಕವಾಗಿ ತಿಳಿಸುತ್ತಾರೆ.

"ಎಂದು ಬರುವಳೊ ನಿನ್ನ
ಕೈಯ ತಕ್ಕಡಿಯನ್ನು
ಕಸಿದು ತೂಗುವ ಕಣ್ಣುಳ್ಳ ಗೌರಿ"

—ಎಂದು ಸಮತಾವಾದದ ವ್ಯವಸ್ಥೆಯ ಆಗಮನದ ಆಶಯವನ್ನೂ ಸೂಚಿಸುತ್ತಾರೆ.

ಧರ್ಮ-ಶಾಸ್ತ್ರಗಳ ಹೆಸರನಲ್ಲಿ ಸಾಗಿ ಬಂದಿರುವ ಶೋಷಣೆಯನ್ನು ಕುರಿತು

"ಧರ್ಮ ಗುರುಗಳ ತತ್ವಗಳ ರಕ್ತವನೆ ಹಿಂಡಿ
ಸ್ವಾರ್ಥ ಸನ್ಯಾಸಿಗಳ ಕಾವಿ ಬಟ್ಟೆಗೆ ತೊಡೆವೆ
ದೇವ ದೇವಿಯರನ್ನು ದನಗಳಂದದಿ ಮಾರಿ
ಪುಂಡ ಪೂಜಾರಿಗಳ ಹೊಟ್ಟೆಗಿಡುವೆ
ಪಾಪ ಭೀರುಗಳಾದ ಮೂಕ ಜನತೆಯ ಕೊಂದು
ಪಂಚ ಪಾತಕಿಗಳಿಗೆ ಪಕ್ವಾನ್ನಗೈವೆ
ದುಡಿವವರ ಹುಡಿಗುಟ್ಟಿ ಹಿಡಿಭಂಡವಾಳಿಗರ
ಕೊರಳ ಮಾಲೆಗೆ ಜನರ ಕರುಳ ಕೊಯ್ವೆ"

—ಎಂದು ನಿಂದಿಸಿದ್ದಾರೆ. ಕಲೆ, ಶಾಸ್ತ್ರ, ವ್ಯಾಪಾರ, ವಿಜ್ಞಾನ, ಮತಗಳೆಲ್ಲ ಜನಸಾಮಾನ್ಯರಿಗಾಗಿ ಶ್ರಮಿಸದೆ ಹಣವಂತರ–ಮೇಲು ವರ್ಗಗಳವರ ಓಲೈಕೆ ಮಾಡುತ್ತಾ ಬಂದಿವೆ. ಈ ಕ್ರೂರ ಸಮಾಜವು 'ಹಣ ಪ್ರಧಾನ ಸಮಾಜ ಅದು' ಆತ್ಮಗಳ ಮಾರುತ್ತದೆ ಪ್ರೀತಿಯನ್ನು ತೂರುತ್ತದೆ, ಬುದ್ಧಿಯನ್ನು ಧನಿಕರ ದಲ್ಲಾಳಿಯಾಗುವಂತೆ ಮಾಡುತ್ತದೆ ಎಂದು ಕವಿ ವಿಶ್ಲೇಷಿಸಿದ್ದಾರೆ.

ಇಂಥ ಶೋಷಣೆಯು ಸಮಾಜವನ್ನು

“ ಶಾಸ್ತ್ರಗಳ ಮಾರ್ಪಡಿಸಿ ಸ್ವಾರ್ಥಕ್ಕೆ ತಕ್ಕಂತೆ
ಆರ್ತರನು ಸುಲಿಯುತಿಹೆ ಚಾಂಡಾಲಿಯೆ
ಕಟುಕರಿಗೆ ಸ್ವಾತಂತ್ರ್ಯ ಕೊಟ್ಟು ಸದಯರನೆಲ್ಲ
ಬಂಧನದಿ ಬಿಗಿದಿರುವೆ ಎಲೆ ಕಾಳಿಯೆ ”

ಎಂದು ಮೂರ್ತೀಕರಿಸಿ ಕಟುಟೀಕೆ ಮಾಡಿದ್ದಾರೆ.

ಇಲ್ಲೆಲ್ಲಾ ‘ಸಮಾಜ’ ಎಂದು ಅವರು ಸಾರ್ವತ್ರೀಕರಿಸಿ ಹೇಳಿದ ಮಾತುಗಳೆಲ್ಲ ‘ಶೋಷಕ ವರ್ಗ’ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

ಕವಿಗೆ ತಮ್ಮ ಚಿತ್ತವನ್ನು ಇಣಿಕಿ ನೋಡಿಕೊಂಡಾಗಲೂ ಅಲ್ಲಿ ದೇಶದ ದುಸ್ಥಿತಿಯೇ ಪ್ರತಿಬಿಂಬಿತವಾಗಿರುವುದು ಕಂಡು ಬರುತ್ತದೆ. ಮಾನವ ಪ್ರಜ್ಞೆಯ ನಿಜವಾದ ಮೂಲವು ಸಮಾಜ ಎಂಬ ತಿಳುವಳಿಕೆ ಇರುವ ಕವಿ ಮಾತ್ರ ಇಂಥ ಅಂತರ್ನೋಟವನ್ನು ಕೊಡಬಲ್ಲ.

‘ಚಿತ್ತವೊಂದು ಚಾವಡಿ’ ಎಂಬ ಕವನದಲ್ಲಿ ಹಾಳು ಗೋಡೆ, ಮೇಲೆ ಜೇಡ, ಹಳೇ ಮಾಳಿಗೆ ಮುಂತಾದವು ದೇಶವ ಕೊಳೆತ ಮಾನಸವನ್ನು ಸೂಚಿಸುತ್ತವೆ. ಹೀಗೆಯೇ ‘ಮನದ ಮಸಣ’ ಎಂಬ ಕವನವೂ–

“ಇಂದು ನೀ ನೋಡುತಿಹೆಯಿಲ್ಲಿ
ಬೆಲೆಗಳ ಬೂದಿಯನು
ಕಲೆಗಳ ಕೊಳೆತ ಹೆಣಗಳನು
ಒಲವಿನ ತಲೆಬುರುಡೆಯನ್ನು” [೮]

“...ನೀಚತೆಯ ನರಿಗಳು
ದೌರ್ಜನ್ಯ ಫಣಕಗಳು
ನಗ್ನ ಕಾಮದ ಕೊಳ್ಳಿ ದೆವ್ವಗಳು
ಸ್ವಾರ್ಥ ಸರ್ಪಗಳು”

ಈ ಮಸಣದಲ್ಲಿ ವ್ಯಾಪಿಸಿವೆ ಎಂಬುದನ್ನು ತಿಳಿಸುತ್ತದೆ.

ದೇಶದ ಇಂಥ ಕರಾಳ ಪರಿಸ್ಥಿತಿಗೆ ಕಾರಣೀಭೂತವಾಗಿ ಶೋಷಕ



ಜನರ ಮನದೊಳಗೆ ತುಂಬಿರುವ ದುಷ್ಟ–ನೀಚ ಜಂತುಗಳಂಥ ದುರ್ಗುಣಗಳೇ ಎಂಬುದನ್ನು ಕವಿ ಸುಂದರವಾಗಿ ನಿರೂಪಿಸಿದ್ದಾರೆ.

ಇದೇ ಪರಿಶೀಲನೆಯನ್ನು ಇನ್ನೂ ಸ್ಪಷ್ಟವಾಗಿ

“ಭಾರತದಲ್ಲಿಂದು ಊರೂರಿಗೂ ನೀರೋಗಳಯ್ಯ —ಶಿಖಂಡಿಗಳು-
ತೊಗಲಖರು-ದರೋಡೆಖೋರರು-ಆರ್ಥಿಕ ಕ್ಷೇತ್ರದ ಹಣಹದ್ದುಗಳು

ರಾಜಕೀಯ ಕ್ಷೇತ್ರದ ರಣಹದ್ದುಗಳು
ಭಾರತದ ಭಾಗ್ಯ ವಿಮಾನವನ್ನು ಬಡಿದುರುಳಿಸುತ್ತಿವೆಯಯ್ಯ
ನೌಕರಿಶಾಹಿಯ ಗಿಡಗಗಳು
ಪುರೋಹಿತ ಶಾಹಿಯ ಶರಭಗಳು
ದುರ್ಬಲರ ಕುಕ್ಕಿ ಮುಕ್ಕುತಲಿವೆಯಯ್ಯ” [೯]

‘ಎಂಥ ದೇಶವಿದು, ಎಂಥ ನರಪಶುಗಳ ಆವಾಸವಾಯಿತಯ್ಯ’ ಎಂದು ವೇದನೆಯಿಂದ ಬಣ್ಣಿಸಿದ್ದಾರೆ.

“ವಿಶ್ವವಿದ್ಯಾಲಯಗಳಲ್ಲಿಯೇ
ಸಂಸ್ಕೃತಿಯ ಕೊಲೆ
ಜಾತ್ಯತೀತ ಸರ್ಕಾರದ ಕಾರ್ಯಾಲಯಗಳಲ್ಲಿಯೇ
ಜಾತೀಯತೆಯ ಬೃಹದ್ ಬಲೆ
ಎಲ್ಲೆಲ್ಲಿಯೂ ಹಿಂಸೆಯ ಅಲೆ
ಭ್ರಷ್ಟಾಚಾರದ ನೆಲೆ...ಸಜ್ಜನರಿಗಿನ್ನೆಲ್ಲಿ ನೆಲೆ” [೧೦]

--ಇದು ಇಂದು ಕಾಣುತ್ತಿರುವ ದುಸ್ಥಿತಿ. ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಮರೆತು ಐಷಾರಾಮೀ ಬದುಕಿನತ್ತ ಬಾಯಿ ಬಿಡುತ್ತ ಓಡುತ್ತಿದ್ದಾರೆ. “ವಾಚನಾಲಯ ಪ್ರಯೋಗಾಲಯ ಕ್ರೀಡಾಂಗಣಗಳಲ್ಲಿ ಕಾಣಿಸಬೇಕಾದ ನವ ಯುವಕರು ಕ್ಲಬ್ಬು–ಬಾರುಗಳಲ್ಲಿ; ಹಳ್ಳಿ–ಕೊಳಗೇರಿಗಳಲ್ಲಿ ಸೇವೆ ಸಲ್ಲಿಸಬೇಕಾದ ಸಚಿವರು–ಶಾಸಕರು ಪಂಚತಾರಾ ಹೋಟೆಲುಗಳಲ್ಲಿ; ಹೊಲಗೇರಿಗಳಲ್ಲಿ ಉದ್ಧಾರ ಕಾರ್ಯ ಮಾಡಬೇಕಾದ ಗುರುಗಳು–ಸ್ವಾಮಿಗಳು ಅಡ್ಡಪಲ್ಲಕ್ಕಿಗಳಲ್ಲಿ” [೧೧] ಕಂಡು ಬರುವದು-ವಿಪರ್ಯಾಸ ಚಿತ್ರಗಳಾದರೂ ವಾಸ್ತವವಾಗಿವೆ.

ಇಲ್ಲೆಲ್ಲ ಕಾವ್ಯವನ್ನು ಹುಡುಕುವವರಿಗೆ ನಿರಾಶೆಯಾಗಬಹುದು. ಆದರೆ ಇಂಥಲ್ಲಿ ಅರ್ಥ ಸಂವಹನವೇ ಕವಿಯ ಉದ್ದೇಶವಾಗಿರುತ್ತದೆ.

ಪರಿಸ್ಥಿತಿಯ ವಾಸ್ತವಿಕ ಚಿತ್ರಣ ಕೊಡುತ್ತಲೇ ಕವಿಯು ಆದರ್ಶ ಸಮಾಜದ ಚಿತ್ರವನ್ನೂ-ಪರಿಹಾರವನ್ನೂ ತಿಳಿಸಿಕೊಡುತ್ತಾರೆ. ಕಾವ್ಯ ಸೌಂದರ್ಯವನ್ನು ಆಸ್ವಾದಿಸುತ್ತಾ ಕೂಡುವುದಕ್ಕಿಂತಲೂ ಕಠೋರ ಸತ್ಯವನ್ನು ಚಿತ್ರಿಸುವುದು ಹಾಗೂ ಆ ಮೂಲಕ ಜನಮನದಲ್ಲಿ ಸರಿಯಾದ ತಿಳುವಳಿಕೆಯನ್ನು ಮೂಡಿಸುವುದು ಇಂದು ಕಾವ್ಯದ ಗುರಿಯಾಗಿದೆ. ಆದರೂ ಇದನ್ನೇ ಇನ್ನಷ್ಟು ಕಲಾತ್ಮಕವಾಗಿ ಹೇಳಲು ಸಾಧ್ಯವಿಲ್ಲವೇ ಎಂಬ ಅನುಮಾನ ಬಾರದಿರದು.

## ರಾಜಕಾರಣ ವಿಮರ್ಶೆ

ಇಂದಿನ ಸಮಾಜದ ಪರಿಸ್ಥಿತಿ ಹಾಗೂ ಸಮಸ್ಯೆಗಳಿಗೆ ಪ್ರಜೆಗಳೇ ಆರಿಸಿ ಕಳಿಸಿ ಆಳಿಸಿಕೊಳ್ಳುವ ರಾಜಕೀಯ ವ್ಯವಸ್ಥೆಯೇ ಮುಖ್ಯ ಹೊಣೆಯಾಗುತ್ತದೆ. ಇಂದಿನ ಜನಜೀವನವು ತನ್ನೆಲ್ಲ ರಂಗಗಳ ನಿಯಂತ್ರಣ ಮೂಲವನ್ನು ರಾಜಕೀಯದಲ್ಲಿಯೇ ಕಂಡುಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ.

ಆದರೆ ಹೆಸರಿಗೆ ಪ್ರಜಾತಂತ್ರವಾದರೂ ಜನನಾಯಕರೂ, ಅಧಿಕಾರಿಗಳೂ ಸಾರ್ವಭೌಮರೆಂಬಂತೆ ಮೆರೆಯುತ್ತಿರುವುದು ವಸ್ತು ಸ್ಥಿತಿಯಾಗಿದೆ. ಸಾಮಾನ್ಯ ಪ್ರಜೆಗೆ ರಾಜತ್ವ ಇರುವ ಬದಲು ಕಾಳಸಂತೆಕೋರರು, ಹೆಂಡದ ಗುತ್ತಿಗೆದಾರರು, ಅಧಿಕಾರಿಗಳು, ಶಾಸಕರು ಮುಂತಾದವರೆಲ್ಲ ರಾಜರಂತೆ ಮೆರೆಯುತ್ತಿದ್ದಾರೆ.

"ಎಷ್ಟು ತರದ ರಾಜರು—ಅಬ್ಬಾ ಇವರ ಆರ್ಭಟವೇ
ದೇಶವೆಲ್ಲ ಅಟ್ಟವಾಗಿದೆ
ಇವರ ನಿಶಾಚರ ನಾಟ್ಯಕ್ಕೆ"

ಎಂದು ಅಂಥವರ ಬಗ್ಗೆ ಕಾವ್ಯಾನಂದರು ಉದ್ಗಾರ ತೆಗೆದಿದ್ದಾರೆ.

"ಕೆಲವರು ಸ್ವತಂತ್ರವಾಗಿರಲು ಬಹುಜನ ಬಂಧನದಲ್ಲಿರ ಬೇಕೇನಯ್ಯಾ
ಕೆಲವರು ಒಡೆಯರಾಗಿರಲೆಂದು ಬಹುಜನರು ಬಡವರಾಗಿಯೇ
ಬಳಲಬೇಕೇನಯ್ಯಾ"



ಎಂದು ಸ್ವಾತಂತ್ರ್ಯದ ಆಣಕವನ್ನು ಪ್ರಶ್ನಿಸಿದ್ದಾರೆ. ಬಹುಸಂಖ್ಯಾತ ಬಡ ಜನತೆಯ ದೃಷ್ಟಿಯಿಂದ ದೇಶಕ್ಕೆ ಸ್ವಾತಂತ್ರ್ಯಬಂದಿರುವುದು ಸುಳ್ಳು ಎನ್ನುವುದು ಕಠೋರ ಸತ್ಯ.

ರಾಜಕಾರಣವನ್ನು ರಾಮಾಯಣ ಮಹಾಭಾರತಗಳ ಪಾತ್ರಗಳ ಹಿನ್ನೆಲೆಯಲ್ಲಿ ಕಾವ್ಯಾನಂದರು ವಿಡಂಬಿಸಿರುವ ರೀತಿಯು ಮನಂಬುಗುವಂತಿದೆ :

"ಕೀಳು ರಾಜಕಾರಣ
ಹತ್ತು ಮುಖದ ರಾವಣ
ಸ್ವಾರ್ಥ ಶೂರ್ಪನಖಿಯ ಮಾತ
ಕೇಳಿ ಸುಗುಣವೆಂಬ ಸೀತೆಯನ್ನು ಕದ್ದು ದುರುಳತನದಿ
ಇಟ್ಟು ಬಿಟ್ಟ ಶೋಕವನದಿ
ಸಂಸ್ಕೃತಿ ಶ್ರೀರಾಮ
ಹಲಬುತಿಹ ವನವನದಿ
ಸಾಹಿತ್ಯದ ಆಂಜನೇಯ
ಹುಡುಕಿ ಬಾರೋ ಹಾರಿ ಜಲಧಿ
ಸುಗುಣವೆಂಬ ಸೀತೆಯ
ಪೂತೆ ಖ್ಯಾತೆ ತ್ರಾತೆಯ" ೧೨

"ಒಳಿತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ . . . .
ಪಂಚಶೀಲ ಪಾಂಚಾಲಿಯ
ವಸ್ತ್ರ ಹರಣ ನಡೆದಿದೆ
ದುರ್ಯೋಧನ ದುಶ್ಯಾಸನ-
ರಟ್ಟಹಾಸ ನಡೆದಿದೆ
ತಾಳು ಧರ್ಮ—ದ್ರೌಪದಿ
ಮುಗಿಯಲಿದೆ ಪಣದ ಅವಧಿ
ಬರುವ ಪುಣ್ಯ ಪಾರ್ಥನಿಗೆ
ಋತದ ಪಾರ್ಥಸಾರಥಿ" ೧೩

ಇಲ್ಲಿ ಅವರು ಬಳಸಿರುವ ಪ್ರತೀಕಗಳು ದುಷ್ಟ-ಶಿಷ್ಟ ಎಂದು ಸರಳೀಕರಿಸಲಾದ ಪೌರಾಣಿಕ ಪಾತ್ರಗಳು. ರಾಮಾಯಣ ಮಹಾಭಾರತಗಳ ಕಥೆ-ಪಾತ್ರಗಳನ್ನು ಆಧುನಿಕ ದೃಷ್ಟಿಯಿಂದ ಪುನರ್‌ವೀಕ್ಷಿಸುವ ಪ್ರಯತ್ನ ಸಾಹಿತ್ಯಲೋಕದಲ್ಲಿ ಅಲ್ಲಲ್ಲಿ ನಡೆದಿದೆ. ಅವುಗಳಲ್ಲಿರುವ ಶೋಷಣೆಯ ಅಂಶಗಳನ್ನು ಬಯಲಿಗೆಳೆಯಲಾಗುತ್ತಿದೆ. ಅವು ಬೆಳೆಸಿಕೊಂಡು ಬಂದಿರುವ ವರ್ಣ-ವರ್ಗ-ದಾಸ್ಯ ಪರಂಪರೆಯ ಮೂಲಕ್ಕೆ ಹೋಗಿ ವಿಶ್ಲೇಷಿಸುವ ಜರೂರು ಸಮತಾವಾದದ ದೃಷ್ಟಿಯಿಂದ ಅನಿವಾರ್ಯವಾಗಿದೆ. ಹೀಗಿರುವಾಗ ಕಾವ್ಯಾನಂದರು ಇಂಥ ಪರಂಪರೆಯನ್ನು ಅನುಮೋದಿಸುವಂತೆ ಬರೆದಿದ್ದಾರೆಂಬುದು ಒಂದು ಅಂಶ.

ಅಲ್ಲದೆ ಅವರು ಬಯಸುವ ಬದಲಾವಣೆಯೆಂದರೆ ಸಂಸ್ಕೃತಿ-ಸುಗುಣಗಳು (ರಾಮ - ಸೀತೆ), ಪುಣ್ಯ - ಋತ (ಪಾರ್ಥ, ಕೃಷ್ಣ) ಮುಂತಾದವು ಸಮಾಜದಲ್ಲಿ ಬರಬೇಕೆಂಬುದಾಗಿದೆ. ಇವೂ ಕೂಡಾ ಶೋಷಿತವರ್ಗದ ದೃಷ್ಟಿಯಿಂದ ಸಮಾಧಾನಕರ ಹಾಗೂ ವಾಸ್ತವಿಕವಾದ ಪರಿಹಾರಗಳನ್ನು ಸೂಚಿಸಲು ಅಸಮರ್ಥವಾಗುತ್ತವೆ-ಎಂಬುದು ಇನ್ನೊಂದು ಅಂಶ.

ಈ ನಿಲುವು ನವೋದಯದ ಮೇಲ್ಪದರಿನ ಸಾಮಾಜಿಕ ಪ್ರಜ್ಞೆಯ ಒಂದು ಲಕ್ಷಣವಾಗಿದೆ. ಆದರೆ ಕಾವ್ಯಾನಂದರ ಸಾಮಾಜಿಕ ಧೋರಣೆಯು ಸಮನ್ವಯ ದೃಷ್ಟಿಯದು ಎಂಬುದನ್ನು ಮರೆಯಬಾರದು. ಸಮಾಜದ ನೈತಿಕತೆಯು ಪ್ರಜಾರಾಜ್ಯದ ರಾಜಕಾರಣದಿಂದಾಗಿ ಅಧೋಗತಿಗಿಳಿದು ಹೋಗಿದೆ ಎಂಬ ಪರಿಶೀಲನೆಯ ಮಟ್ಟಿಗೆ ಅವರ ಮೇಲಿನ ಕವನಗಳು ಸಾರ್ಥಕವೇ ಆಗಿವೆ.

ಇಂದಿನ ರಾಜಕಾರಣಿಗಳ ಮೌಲ್ಯರಹಿತ ಭಂಡತನವನ್ನು ಅವರು ವಿಡಂಬಿಸುವ ರೀತಿ ಹೀಗಿದೆ :

"ಜಿಂದಾಬಾದ್ ಮುರ್ದಾಬಾದ್
ಈ ಎರಡನ್ನು ಕಲ್ತು ಬಿಡು—
ಬಾಬಾಗಳು ಬಂದ್ರೆ ಪರಾಕು ಹೊಡಿ
ಮುಖಂಡ್ರು ಬಂದ್ರೆ ಜೈಕಾರ ಹೊಡಿ
ಗೆದ್ದ ಎತ್ತಿನ ಬಾಲ ಹಿಡಿ



ಹೊತ್ತು ಬಂದ್ಹಾಂಗ ಕೊಡೆ ಹಿಡಿ—
ಹಣಾ ಹೆಂಡಾ ಕೊಡೋವ್ರು ದೇವ್ರು
ಅವರ್ನ ಹಾಡಿ ಹರಸಾಕ ಕಲಿ" [೧೪]

"ಮಂದೀ ಮನಿಗೆ ಬೆಂಕಿ ಹತ್ತಿದ್ರೆ
ಅದರಾಗ ಬ್ಯಾಳಿ ಬೆಯ್ಸಾಕ ಕಲಿ
ಉಂಡಮನೀ ಗಳಾ ಎಣಿಸಿ
ಅದಕಾ ಕನ್ನ ಹಾಕಾಕ ಕಲಿ--
ಬಡವರ ಸುಲಿದು ಒಡೆತನ ಗಳಿಸಿ ಮೆರೆಯಾಕ ಕಲಿ--
ದುಡೀದೆ ದುಡ್ಡು ದೋಚೋಕೆ ಕಲಿ"

ಯಾವ ವಿದ್ಯೆ-ಪರಿಣತಿ-ಪದಿಗಳನ್ನು ಸಾಧಿಸದೆಯೇ ಇದ್ದರೂ ಇಂದು ರಾಜಕಾರಣ ರಾಜಕಾರಣದಲ್ಲಿಳಿದು ಹಣದೋಚುವ ಮಾರ್ಗಗಳು ಹೀಗಿವೆ. ರಾಜಕಾರಣ ಭ್ರಷ್ಟವಾಗಿರುವುದರಿಂದಲೇ ಅದು ಇಡೀ ದೇಶವನ್ನೆಲ್ಲ ಭ್ರಷ್ಟಮಯವಾಗುವಂತೆ ಕೆಳಗೆ-ಒಳಗೆಲ್ಲ ಇಳಿದು ವ್ಯಾಪಿಸುವಂತೆ ಮಾಡಿಬಿಡುತ್ತದೆ. ನಿಜವಾದ ಪ್ರಾಮಾಣಿಕ, ಸತ್ಯಸಂಧ ಎನ್ನುವಂಥವರಿಗೆ ರಾಜಕಾರಣದಲ್ಲಿರಲು ಸಾಧ್ಯವೇ ಇಲ್ಲ ಎಂಬಂತಾಗಿದೆ ಪರಿಸ್ಥಿತಿ.

"ಎಷ್ಟೆಷ್ಟು ಶಾಸನಗಳನ್ನು ಉಲ್ಲಂಘಿಸುವನೋ ಅಷ್ಟಷ್ಟು ದೊಡ್ಡ
ನಾಯಕನೀಗ;
ಶಾಸನ ಅನುಸರಿಸುವವನೇ ಷಂಡ-ಸಭ್ಯ" [೧೫]

ಇಂಥ ಪುಡಾರಿಗಳಿಂದ ನಮ್ಮನ್ನೆಂದು ಪಾರುಮಾಡುವಿಯಯ್ಯಾ ಎಂದು ಕವಿ ದೇವರಲ್ಲಿ ಮೊರೆಯಿಡುತ್ತಾರೆ. ಏಕೆಂದರೆ ಪರಿಸ್ಥಿತಿ ಅಷ್ಟು ನಿರಾಶಾದಾಯಕವಾಗಿದೆ. ಜಾಗೃತರಾಗಬೇಕಾಗಿದ್ದ ಜನಸಾಮಾನ್ಯರಲ್ಲಿ ಇನ್ನೂ ಕುರಿತನ ಹಾಗೆಯೇ ಉಳಿದಿದೆ. 'ತೋಳಗಳನ್ನು ಗುರುತಿಸುವುದನ್ನು ಜನ ಇನ್ನೂ ಕಲಿಯಲಿಲ್ಲ' ಎಂದು ವೇದನೆಯಿಂದ ನುಡಿದಿದ್ದಾರೆ ಕವಿ.

'ಸಾಮಾನ್ಯರು ತಪ್ಪು ಮಾಡಿದರೆ ಶಿಕ್ಷೆ
ರಾಜಕಾರಣಿ ಮಾಡಿದರೆ ಭದ್ರ ರಕ್ಷೆ'

ಎಂದು ಕಾನೂನು ಹೇಗೆ ಧನ—ಅಧಿಕಾರದ ಆಳಾಗಿದೆಯೆಂಬುದನ್ನು

ಚೂಟಿಯಾಗಿ ಹೇಳಿದ್ದಾರೆ. ನಿಜವಾಗಿಯೂ ಬಡ ಜನತೆಯ ಗೋಳನ್ನು ಯಾರೂ ಕೇಳದಂಥ ಪನವಾಶಸ್ಥಿತಿಯೇ ಈಗ ಇರುವುದು.

ಇಂಥ ಅವ್ಯವಸ್ಥೆಯ ವ್ಯವಸ್ಥೆಯು ಹೀಗೆ ಮುಂದುವರಿಯಬೇಕೆಂದು ಆಶಿಸುತ್ತಾರೆ ಸುಲಿಗೆಗಾರರು. ಕವಿ ವಿಡಂಬಿಸಿರುವದು ಹೀಗೆ :

"ವ್ಯವಸ್ಥೆಯ ವೈರಿಗಳು ನಾವು
ನಮ್ಮಿಂದ ವ್ಯವಸ್ಥೆಗೆ ಸಾವು
ವ್ಯವಸ್ಥೆ ಇರುವಲ್ಲಿ ನಾಸ್ತಿ ನಮಗೆ
ಅವ್ಯವಸ್ಥೆಯಿದ್ದರೆ ಲಾಭ ಜಾಸ್ತಿ ನಮಗೆ
ಅಂತೆಯೇ ಅವ್ಯವಸ್ಥೆಯಲ್ಲಿಯೇ ಆಸ್ಥೆ ನಮಗೆ
ಇರಲಿ ಬಿಡಿ ಅವ್ಯವಸ್ಥೆ
ಅವ್ಯವಸ್ಥೆಯೇ ಇಂದಿನ ವ್ಯವಸ್ಥೆ"[೧೬]

## ಶೋಷಕ ವರ್ಗ ವಿಡಂಬನೆ

ರಾಜಕಾರಣಿಗಳು, ಉದ್ದಿಮೆದಾರರು, ಗುತ್ತಿಗೆದಾರರು, ಕಾಳಸಂತೆಕೋರರು, ದಲ್ಲಾಳಿಗಳು, ಅಧಿಕಾರಿಗಳು, ಮತ್ತು ಸಾಮಾನ್ಯರಿಂದ ಹಣ ಸುಲಿಯುತ್ತ ಕೊಬ್ಬುತ್ತಾ ಹೊರಟಿರುವ ಎಲ್ಲ ಮೇಲ್ದರ್ಜೆಯ ಉದ್ಯೋಗಿಗಳು, ಕಲಾಕಾರರು, ಹಾಗೂ ಧರ್ಮ-ದೇವರ-ಜಾತಿಯ ಆಧಾರಗಳಮೇಲೆ ಜನರನ್ನು ತುಳಿಯುತ್ತ ಬಂದಿರುವವರು-ಇವರೆಲ್ಲರೂ ಶೋಷಕ ವರ್ಗ ಎನಿಸಿಕೊಳ್ಳುತ್ತಾರೆ. ಶೋಷಣೆಯ ರೂಪಗಳು ಅಸಂಖ್ಯವಾದರೂ ಶ್ರಮಜೀವಿಗಳ ದುಡಿಮೆಯ ಮೇಲೆ ಇವರು ಬೆಳೆದು ಬಲಿಯುತ್ತಾ ಹೋಗುತ್ತಾರೆ.

ಇಂಥ ವರ್ಗ ವೈಷಮ್ಯದ ಪ್ರಜ್ಞೆ ಕಾವ್ಯಾನಂದರಿಗೆ ಸ್ಪಷ್ಟವಾಗಿದೆ. ದೇಶವೆಂಬ ಉಗ್ರಾಣಕ್ಕೆ ಬಿದ್ದ ಇಲಿ-ಹೆಗ್ಗಣಗಳೆಂದು ಅವರು ಶೋಷಕರನ್ನು ಬಣ್ಣಿಸಿದ್ದಾರೆ.

"ಇರುವೆ ತಿನ್ನಲಿ
ಇಲಿ ತಿನ್ನಲಿ



ಹೆಗ್ಗಣ ತಿನ್ನಲಿ
ಎಂಟು ಗೇಣಿನ ನಡೆದಾಡುವ ಹೆಗ್ಗಣ ತಿನ್ನಲಿ
ಹಸಿದ ಮಾನವ ಮಾತ್ರ ತಿನ್ನದಿರಲಿ....
ಹಸಿದವರ ಹೊಟ್ಟೆ ಬರಿದಾಗಿದ್ದರೇನಂತೆ
ನಿನ್ನ ಹೊಟ್ಟೆಯು ಮಾತ್ರ
ಪುಟ್ಟಪೂರಾ ಭರ್ತಿ"[೧೭]

ದೇಶದ ಸಂಪತ್ತಿಗೇನೂ ಕೊರತೆಯಿಲ್ಲ. ಆದರೆ ಅದು ಜನಸಾಮಾನ್ಯರ ಸೊತ್ತಾಗುವುದಿಲ್ಲ. ಕೆಲವೇ ಮಂದಿ ಹೆಗ್ಗಣದಂತ ಧನಿಕರ ಪಾಲಾಗುತ್ತದೆ. ಕವಿಯು ಇನ್ನೊಂದಡೆಯಲ್ಲಿ ಅವರನ್ನು ಮಹಾವೃಕ್ಷಕ್ಕೆ ಬಿದ್ದ ಕೀಟಗಳಂತೆ ವರ್ಣಿಸಿದ್ದಾರೆ.

"ಇಂಥ ಹೆಮ್ಮರವ ಪುಣ್ಯದ ಮರವ
ಶತಮಾನಗಳ ದಾಳಿ ಹಾಳು ಮಾಡಿದ ಮರವ...
ಸದ್ದಿಲ್ಲದೆಯೇ ಸ್ವಾಹಾ ಮಾಡಿದವು ಕೀಟಗಳು
ಮುದ್ದಿಟ್ಟು ವಿಧ್ವಂಸಗೊಳಿಪ ಕೀಟಗಳು....
ಈ ಬೃಹತ್ತಿಗೇ ಮಹತ್ತಿಗೇ ಗತಿಯೇ ?"[೧೮]

ಮತ್ತೊಂದಡೆ ಶೋಷಕರನ್ನು ಪೀತಾಂಬರಕ್ಕೆ ಬಿದ್ದ ಗೆದ್ದಲು ಹುಳಗಳಿಗೆ ಹೋಲಿಸಿದ್ದಾರೆ. ಮಗುದೊಂದು ಕಡೆ

'ದೇಶ ಹೆಣವಾಗುತ್ತಿರಲು
ಹೆಣ ಎಂದೆ ತಿನ ಬಂದ
ನಾಯಿ ಜಗಳ ನೋಡಾ'[೧೯]

ಎಂದು ನಾಯಿಗಳಿಗೆ ಹೋಲಿಸಿದ್ದಾರೆ. ಅವುಗಳಲ್ಲೂ ಅನೇಕ ವಿಧ. ಬಿಳಿಯರ ಮುಂದೆ ಬಾಲವಲ್ಲಾಡಿಸುತ್ತಿದ್ದ, ಕರಿ ಸಿಪಾಯಿಯು ಮುಂದೆ ಕುಂಯ್ಗುಡುತ್ತಿದ್ದ, ಎಂಜಲಕ್ಕೆ ಬಾಯ್ಬಿಡುವ, ಹಳೆ-ಹೊಸ-ಕೀಳು-ಸೀಳು ನಾಯಿಗಳು. 'ಹೊಸದೇನಿಲ್ಲ ಈ ದೇಶಕ್ಕೆ ಚಿತ್ರ ಹಿಂಸೆ' ಎಂದು ಶೋಷಣೆಯ ನಿರಂತರತೆಯನ್ನು ಕವಿ ಸೂಚಿಸಿದ್ದಾರೆ.

ಈ ಶೋಷಕ ವರ್ಗವು ಶತಶತಮಾನಗಳಿಂದಲೂ ಕುಳಿತುಣ್ಣುತ್ತಾ ಬಂದಿರುವಂತದ್ದು. ಬದಲಾದ ಈ ಕಾಲದಲ್ಲಿ ಅದು ಪ್ರಗತಿಯನ್ನು ನಿರೋಧಿಸುತ್ತದೆ. ನಾನಾ ಸಂಚುಗಳ ಮೂಲಕ ಜಡ ವ್ಯವಸ್ಥೆಯನ್ನೇ ಪೋಷಿಸಿಕೊಂಡು ಹೋಗಲು ಬಯಸುತ್ತದೆ.

"ದುಡಿದುಣ್ಣಲು ನಾಚಿಕೆಯಯ್ಯಾ
ಸ್ವಘೋಷಿತ ಶ್ರೇಷ್ಠ ಕುಲದವರಿಗೆ
ಶತಶತಮಾನಗಳಿಂದ ಸುಲಿಗೆ ತಿಂದು ಬದುಕಿರ್ದರು
ಶ್ರಮದಿಂದ ಬದುಕಲು ಸುಲಭವಾಗಿ ಸಿದ್ಧವಾಗುವರೇನಯ್ಯಾ"

ಎಂದು ಕಾವ್ಯಾನಂದರು ಪುರೋಗಮನಕ್ಕೆ ಅಡ್ಡಿ ಮಾಡುವ ದುಷ್ಟಶಕ್ತಿಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ.

## ಧಾರ್ಮಿಕ ಶೋಷಣೆಯ ಚಿತ್ರಣ

ಧಾರ್ಮಿಕ ವಾತಾವರಣದಲ್ಲಿಯೇ ಬೆಳೆದ ಸಿದ್ದಯ್ಯಪುರಾಣಿಕರ ಮೇಲೆ ಧರ್ಮದ, ಅದರಲ್ಲೂ ವೀರಶೈವ ಧರ್ಮದ ಆಳವಾದ ಪ್ರಭಾವವಿದೆ. ಆದರೆ ಅದರ ದೋಷಗಳ ಬಗ್ಗೆ ತೀವ್ರ ತಿರಸ್ಕಾರವೂ ಇದೆ.

ಮಾನವನ ಸರ್ವಾಂಗೀಣ ಸಂಸ್ಕರಣಕ್ಕೆ ಮತ್ತು ವಿಕಾಸಕ್ಕೆ ಯೋಗ್ಯವಾದ ರೀತಿಯಲ್ಲಿ ವೈಜ್ಞಾನಿಕ ದೃಷ್ಟಿಗೆ ಹೊಂದುವ ರೀತಿಯ ವಿಶಾಲ ಮಾನವ ಧರ್ಮವನ್ನು ಅವರು ಪ್ರತಿಪಾದಿಸುತ್ತಾರೆ.

ಧಾರ್ಮಿಕ ಆಚರಣೆಗೆ ಸಂಬಂಧಪಟ್ಟಂತೆ ವೀರಶೈವ ಧರ್ಮದ ಪರಿಭಾಷೆಯನ್ನು ಸಮಂತಾವಾದಕ್ಕೆ ಅನ್ವಯಿಸಿ ಹಾಡಿರುವ ಅವರ

"ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲ ಸಂಗವು
ಹುಡಿಯೆ ಭಸ್ಮವು ಹುಲ್ಲೆ ಪತ್ರೆಯು
ಜಡವಿದೆಲ್ಲವು ಜಂಗಮ"



ಎಂದು ಪ್ರಾರಂಭವಾಗುವ ಹಾಡು 'ಮಾನವಧರ್ಮದ ಸಾಮಗಾನ' ವೆಂದೆನಿಸಿಕೊಂಡಿದೆ. ವೀರಶೈವ ಪರಿಭಾಷೆಯ ಪರಿಕಲ್ಪನೆಗಳಾದ ಗುರು, ಲಿಂಗ, ಜಂಗಮ, ಪ್ರಸಾದ, ತೀರ್ಥ, ಮಂತ್ರ, ರುದ್ರಾಕ್ಷಿ, ಭಸ್ಮ, ಕರ್ಮ, ಜ್ಞಾನ ಮುಂತಾದುವುಗಳಿಗೆ ಅವರು ಕೊಟ್ಟ ಅರ್ಥಗಳು ಯಾವ ಮತೀಯ ಪರಿಮಿತಿಗೂ ಒಳಗಾಗದೆ ವಿಶ್ವಮಾನ್ಯ ಧರ್ಮವೊಂದರ ರೂಪರೇಷೆಯನ್ನು ನಮ್ಮ ಮುಂದಿಡುತ್ತವೆ. ಆದರೆ ಎಷ್ಟೇ ವಿಶಾಲ ಅರ್ಥ ಕೊಡುತ್ತೇವೆಂದರೂ ಸಂಕುಚಿತ ಆಚರಣೆಯಲ್ಲಿ ಸಿಲುಕಿ ಸವಕಲಾಗಿ ಹೋಗಿರುವ ಆ ಮತೀಯ ಪದಗಳು ಸಮಾಜದ ಸಮಗ್ರ ಬದಲಾವಣೆಯಲ್ಲಿ ಉಪಯುಕ್ತವಾಗುವ ಸಾಧ್ಯತೆ ಕಡಿಮೆ.

ಧರ್ಮದ ಅನ್ವಯದಲ್ಲಿ ಭಾರತೀಯ ಸಮಾಜದಲ್ಲಿ ಉಂಟಾಗಿರುವ ಅನರ್ಥಗಳೆಲ್ಲಕ್ಕೂ ಮೂರ್ತಿ ಪೂಜೆಯೇ ಮೊದಲಾದ ಕರ್ಮಕಾಂಡಕ್ಕೆ ಸಂಬಂಧಿಸಿದ ನಂಬಿಕೆ–ಆಚರಣೆಗಳೇ ಎನ್ನಬಹುದು. ಜಿಡ್ಡುಗಟ್ಟಿ ಹೋಗಿರುವ ಮೂರ್ತಿಪೂಜಾ ಪದ್ಧತಿಯನ್ನು ಕುರಿತು

"ಮೂರ್ತಿಯ ಮುಖದ ಮೇಲಿನ
ಹುಬ್ಬು ಕಣ್ಣು ಮೂಗು ಬಾಯಿಗಳು
ಗುರುತು ಸಿಕ್ಕದ ಹಾಗೆ ವಿಕೃತವಾಗುವವರೆಗೆ
ಎಣ್ಣೆಮಜ್ಜನ ಮಾಡು...ಜಿಡ್ಡಿಗೇ ಅಡ್ಡ ಬಿದ್ದು
ದಿಂಡುರುಳಿ ಎದ್ದು
ಬೇಡಿಕೋ ವರವ"[೨೦]

ಎಂದು ವ್ಯಂಗ್ಯವಾಗಿ ಟೀಕಿಸಿದ್ದಾರೆ.

ಜನಸಾಮಾನ್ಯರನ್ನು ಸ್ವರ್ಗ–ನರಕಗಳ ಆಮಿಷ–ಭಯಗಳಿಂದ ಬಂಧಿಸಿ ವರ್ಗ ಭೇದ–ಮೌಢ್ಯಗಳನ್ನು ಧರ್ಮದ ಹೆಸರಿನಲ್ಲಿ ಅಧಿಕೃತಗೊಳಿಸಿ ಬೆಳೆಸಿಕೊಂಡು ಬಂದಿದೆ ಪುರೋಹಿತ ವರ್ಗ. ಸ್ವರ್ಗನರಕ ಬೇರೆಲ್ಲೂ ಇಲ್ಲ, ಮರ್ತ್ಯದಲ್ಲಿಯೇ ಎಲ್ಲವೂ ಇವೆಯೆಂದು ಅವುಗಳ ಭ್ರಮೆಯನ್ನು ತೊಡೆ–

ಯಲು ಹನ್ನೆರಡನೇ ಶತಮಾನದಲ್ಲೇ ಶರಣರು ಘಂಟಾಘೋಷವಾಗಿ ಸಾರಿದ್ದರೂ ಇಲ್ಲಿಯವರೆಗೂ ಮೌಢ್ಯತೆ ಅಳಿಯಲಿಲ್ಲ.

ಸ್ವರ್ಗವನ್ನು ತಿರಸ್ಕರಿಸುವಂತೆ ಕಾವ್ಯಾನಂದರೂ

"ಬೇಕಿಲ್ಲ ಸಿರಿಸೊಗದ ಸುರುಕುಗಳು ನನಗೆ
ಸಾಕಿಷ್ಟು ಒಣರೊಟ್ಟಿ ಮುರುಕುಗಳು ನನಗೆ
ನಿಮ್ಮ ಕಪಿ ಮುಷ್ಟಿಯನು ಮಾತ್ರ ಬಿಡಿರಿ...
ಬೇಡ ನೀವೀಯುವಾ ಸ್ವರ್ಗದ ಟಿಕೆಟ್ಟು
ಪರಲೋಕದಲಿ ಪವವಿ ಪಡೆವ ಪರ್ಮಿಟ್ಟು"೨೧

ಎಂದು ಸ್ವರ್ಗಕ್ಕೆ 'ಹಾರುವ'ವರನ್ನು ಟೀಕಿಸಿದ್ದಾರೆ.

ಪರಪುಷ್ಟ ಜೀವಿಗಳಾಗಿರುವ ಪುರೋಹಿತ ವರ್ಗವನ್ನು ಕಟುವಾಗಿ ನಿಂದಿಸುವ ಈ ವಚನವನ್ನು ನೋಡಬಹುದು:

"ಭಿಕ್ಷೆ ಬೇಡಿ ಬದುಕಲು ನಾಚಿಕೆಯಿಲ್ಲ
ಭಟ್ಟಂಗಿಗಳಾಗಿ ಬದುಕಲು ನಾಚಿಕೆಯಿಲ್ಲ
ಪಂಚಾಂಗ ಹೇಳಿ ಸುಳ್ಳು ಸಾಕ್ಷಿ ಹೇಳಿ ಬದುಕಲು ನಾಚಿಕೆಯಿಲ್ಲ
——ದುಡಿದುಣ್ಣಲು ನಾಚಿಕೆಯೆಯ್ಯಾ
ಸ್ವಘೋಷಿತ ಶ್ರೇಷ್ಠ ಕುಲದವರಿಗೆ "೨೨

ಶ್ರಮ ಜೀವನವು ಅತಿ ಕೀಳೆಂದು ಪರಿಗಣಿಸಲಾಗಿ ಪೈಗಳ್ಳರಿಗೇ ಹೆಚ್ಚಿನ ಗೌರವ ಆದರಗಳು ಸಿಗುವಂತೆ ನಮ್ಮ ಸಮಾಜದ ನಂಬಿಕೆಗಳು ಬೆಳೆದು ಬಂದಿರುವ ವಿಪರ್ಯಾಸಕ್ಕೆ ಈ ಪುರೋಹಿತ ವರ್ಗವನ್ನೇ ಹೊಣೆ ಮಾಡಬೇಕಾಗುತ್ತದೆ. ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲೂ ಈ ವರ್ಗವು ಶ್ರಮ ಗೌರವದ ಮಾರ್ಗಕ್ಕೆ ಬರಲು ಸುಲಭವಾಗಿ ಒಪ್ಪುವುದಿಲ್ಲ.

ಮತವೊಂದು ಹೆಂಡದಂತೆ ಎಂಬ ಮಾರ್ಕ್ಸನ ಮಾತು ಭಾರತೀಯ ಮತ ಪರಂಪರೆಗಳಿಗೆ ಬಹು ಚೆನ್ನಾಗಿ ಅನ್ವಯವಾಗುತ್ತದೆ. ಮತೀಯ ಅಂಧತೆಗೆ ಜನ ತಮ್ಮನ್ನು ತಾವು ಮಾರಿಕೊಂಡು ಬಿಟ್ಟಿದ್ದಾರೆ. ಇದನ್ನು ಖಡಾಖಂಡಿತವಾಗಿ ಕಾವ್ಯಾನಂದರು ತಿಳಿಸುತ್ತಾರೆ :



"ಮತವೊಂದಕ್ಕೆ ಮಾರಿಕೊಂಡಾಗ
ಮತಿಯ ಆತ್ಮಹತ್ಯೆ
ವ್ಯಕ್ತಿಯೊಬ್ಬನ ಪೂಜೆ ಪ್ರಾರಂಭವಾದಾಗ
ಸ್ವಾತಂತ್ರ್ಯದ ಆತ್ಮಹತ್ಯೆ
ಪವಾಡ ಪೊಳ್ಳು ಆಶ್ವಾಸನೆಗಳನ್ನು ನಂಬಿದಾಗ
ಜನತೆಯ ಆತ್ಮಹತ್ಯೆ ನೋಡಾ"೨೩

'ರೊಟ್ಟಿ'ಯು ಶ್ರಮಜೀವನದ, ಕಠೋರ ವಾಸ್ತವತೆಯ, ಸರಳ ಬದುಕಿನ ಹಾಗೂ ಸಮತಾವಾದದ ಸಂಕೇತವಾಗಿ ಕಾವ್ಯಾನಂದರಿಂದ ಅಲ್ಲಲ್ಲಿ ಬಳಕೆಯಾಗಿದೆ. ದೇವರ ವಿವಿಧ ಅವತಾರ ಕತೆಗಳನ್ನು ಅಲ್ಲಗಳೆಯುತ್ತ ಅವರು "ಏನೇನೋ ಅವತಾರಗಳ ಎತ್ತಿ ಬಂದಿರುವಿಯಂತೆ, ಈಗ ಹಸಿದವರ ಮುಂದೆ ರೊಟ್ಟಿಯಾಗಿ ಅವತರಿಸು" ಎಂದು ರೊಟ್ಟಿಗೆ ಪರಮಾತ್ಮತ್ವವನ್ನೂ ಆರೋಪಿಸಿದ್ದಾರೆ.

## ಶೋಷಿತ ಪರ ನಿಲುವು

ಸಮಾಜದ ಅತಿ ಕೆಳಗಿನ ಜನರ ಬಗ್ಗೆ ಕಾವ್ಯಾನಂದರ ಹೃದಯ ಹೂವಾಗುತ್ತದೆ, ಕರುಣಾಪೂರ್ಣವಾಗುತ್ತದೆ. ಹಾಗೆಯೇ ಬಡಿದೆಬ್ಬಿಸುವ ತೂರ್ಯವಾಣಿಯೂ ಆಗುತ್ತದೆ. ದೇಶ ಕಟ್ಟಿದವರು, ಹೋರಾಡಿದವರು, ಬೆಳೆದು ಅನ್ನಕೊಡುವವರು ಒಟ್ಟಿನಲ್ಲಿ ದೇಶದ ತಳಹದಿಯಾಗಿರುವವರು ದುಡಿಯುವ ಜನಸಾಮಾನ್ಯರೇ. ಆದರೆ ಅವರು ಮೇಲುವರ್ಗಗಳ ಅವಜ್ಞೆಗೆ ಗುರಿಯಾಗಿ ಹೋಗಿದ್ದಾರೆ-ತುಳಿತಕ್ಕೆ ಒಳಗಾಗಿ ನಲುಗಿ ಹೋಗಿದ್ದಾರೆ. ಕಾವ್ಯಾನಂದರು ಈ ವಾಸ್ತವಿಕ ಸತ್ಯವನ್ನು ಎದೆಮುಟ್ಟುವಂತೆ ವರ್ಣಿಸಿದ್ದಾರೆ

"ಸಾಮ್ರಾಜ್ಯ ದಾಹದಲಿ ಸಂಹಾರ ಯಾತ್ರೆಯನು
ಹೂಡಿಹರ ಕತ್ತಿಯೂ ನಿನ್ನ ಕತ್ತಿನ ಮೇಲೆ...
"ಸ್ವಾತಂತ್ರ್ಯ ಪಡೆಯಲಿಕೆ ಸೆರೆಮನೆಯ ಸೇರೆಂದು
ಬೋಧಿಪರ ಮುಷ್ಟಿಯೂ ನಿನ್ನ ಹೊಟ್ಟೆಯ ಮೇಲೆ.
ಸ್ವಾತಂತ್ರ್ಯ ರಕ್ಷಣೆಗೆ ಶಸ್ತ್ರಾಸ್ತ್ರ ಕೊಡಿರೆಂದು
ಬೇಡುವರ ದೃಷ್ಟಿಯೂ ನಿನ್ನ ರಟ್ಟೆಯ ಮೇಲೆ

ನಿನ್ನನುಳಿಸುವೆವೆಂದು ನಿನ್ನನೇ ಸುಲಿಯುತಿಹ
ಅಣ್ಣಗಳ ಸವಿ ಮಾತು ನಿನ್ನಯ ಬಲಿಗೆ..."[೨೪]

ಇದು ದೇಶದ ಎಲ್ಲ ಭಾರವೂ ಬಡವನ ಮೇಲೆಯೇ ಬೀಳುವ ರೀತಿ ಯಾದರೆ ದೇಶದ ಆಧಾರಸ್ತಂಭವಾದ ಅವನ ಸ್ಥಿತಿಯೋ ಅತಿ ಹೀನಸ್ಥಿತಿ.

"ಧನಿಕ ಬಡಕ ದೇಹಕೆ ಜರದ ಬಟ್ಟೆ–
ಮಿರುಗು ಮೈಯಿದ್ದರೂ ಜಡದೇಹ ಬಿಸಿಲಿನಲಿ
ಬೆವರು ಮಳೆ ಸುರಿಸಬೇಕು - - -"
'ಅಳುವೊಂದೆ ನಿನಗುಳಿದ ಸಿರಿಯು ಬಡವ'
"ಹೆಚ್ಚು ಹೇಳುವುದೇನು ನಿನಗೆ ನೀನೇ ಗತಿಯು
ಇಲ್ಲದಿರೆ ನಿನ್ನಿರವೆ ನರಕ ಬಡವ"

ಬಡವನು ತನ್ನ ಸ್ಥಿತಿಯನ್ನು ಸುಧಾರಿಸಲು ಯಾರ ಮೊರೆ ಹೊಕ್ಕರೂ ಪ್ರಯೋಜನವಿಲ್ಲ. ಅವನ ಗತಿಯನ್ನು ಅವನೇ ಸುಧಾರಿಸಿಕೊಳ್ಳಬೇಕು ಎಂದು ಕವಿ ಹೊಣೆಯನ್ನೂ ಅವನಿಗೆ ತಿಳಿಸಿಕೊಡುತ್ತಾರೆ.

'ಜಗದ ಜಾತ್ರೆ ನಡೆಯುವಾಗ ಒಳಗೆ ಯಾಕೆ ಕುಂತಿ
ಪ್ರಗತಿ ರಥವು ಸಾಗುವಾಗ ಸುಮ್ಮನೇಕೆ ನಿಂತಿ
ನೂರು ದುಃಖಗಳನು ನುಂಗಿ ನಗೆಯ ತೋರಬೇಕು
ಎಲ್ಲರೊಡನೆ ಬೆರೆತು ಒಂದೆ ಸೊಗವ ಬೀರಬೇಕು'

ಎಂದು ಮುಂತಾಗಿ ಬಡವನನ್ನು ಹುರಿದುಂಬಿಸಲು ಕವಿಯು ಮಾಡುವ ಪ್ರಯತ್ನದಲ್ಲಿ ನವೋದಯ ವೈಶಿಷ್ಟ್ಯವಾದ ಸರಳೀಕರಣ ದೋಷವೇ ಇದೆ.

ಬಡತನದ-ಶ್ರಮಜೀವಿಗಳ ಪ್ರತೀಕವಾದ ಗುಡಿಸಲು ಸಿರಿವಂತಿಕೆಯ ಅರ ಮನೆಗೆ ಹೀಗೆ ಹೇಳುವುದಂತೆ :

"ಹೊರಗಿನ ಬೆಳಕಿನಲ್ಲಿ ಒಳಗಿನ ಹುಳುಕನ್ನು ಮುಚ್ಚಿಕೊಂಡಿರುವ
ಅರಮನೆಯೆ
ಹೊರಗೆ ಸಾವಿರ ದೀಪಗಳು ಝಗಝಗಿಸುತ್ತಲಿದ್ದರೂ
ನಿನ್ನೆದೆಯೊಳು



ಕತ್ತಲೆಯಿದೆ. ಹೊರಗೆ ಕತ್ತಲೆಯಿದ್ದರೂ ನನ್ನೆದೆಯೊಳು ಬೆಳಕಿದೆ
ನನಗದೇ ಸಾಕು" [೨೫]

ನವೋದಯದ್ದೇ ವೈಖರಿಯಾದ ಈ ಅಲ್ಪತೃಪ್ತ ವೇದಾಂತವು ಬಹುಶಃ ಶೋಷಕ ವರ್ಗಕ್ಕೆ ಒಳಗೊಳಗೇ ನಗು–ನೆಮ್ಮದಿಗಳನ್ನುಂಟುಮಾಡಬಹುದು– ಶೋಷಿತ ಇದ್ದದ್ದರಲ್ಲೇ ತೃಪ್ತನಾಗಿದ್ದಾನೆ-ನನ್ನ ವಿರುದ್ಧ ಸಿಡಿದೇಳಲಾರ ಎಂದು.

ಆದರೆ ಕಾವ್ಯಾನಂದರ ಕಾವ್ಯವೆಲ್ಲ ಸರಳೀಕರಣ ಮಾರ್ಗದ್ದಲ್ಲ.

"ಹೊಸ ಲೋಕವ ಕಟ್ಟುವ ಹೊಣೆ ಇಂದಿನ ಬಡವನದು
ಹೊಸ ಬಾಳನು ರಚಿಸುವ ಹೊಣೆ ನಾಳಿನ ದುಡಿವನದು"

ಎಂದು ಅವರು ಭವಿಷ್ಯದ್ದರ್ಶನವನ್ನೂ ತೋರಿಸಿದ್ದಾರೆ. ಹಳ್ಳಿಗಳ ಜಾಗೃತಿಯಿಂದ ಮಾತ್ರ ದೇಶದ ನಿಜವಾದ ಪ್ರಗತಿ ಎಂಬ ನಂಬಿಕೆಯನ್ನು ವ್ಯಕ್ತಮಾಡಿದ್ದಾರೆ.

"ಹಾಳಾಗಿಹ ಈ ಹಳ್ಳಿಯ ಕಾಲಡಿಯಲಿ ತಳ್ಳಿ
ಬಾಳ್ವುದೆ ಆ ಡಿಳ್ಳಿ
ಧುಮ್ಮಿಕ್ಕಲಿ ಧೀಗಂಗೆಯು ಹಳ್ಳಿಗರೆದೆಯಲ್ಲಿ
ಮನೆ ಮಾಡಲಿ ವಿಜ್ಞಾನವು ಗುಡಿಸಲ ಬದಿಯಲ್ಲಿ...
ನವ ಭಾರತ ನಿರ್ಮಾಣಕೆ ಬೇರೆಯ ವಿಧಿಯೆಲ್ಲಿ
ಭಾರತವೇ ಹಳ್ಳಿ
ಜಯವೆನ್ನಿರಿ"[೨೬]

## ಮಾನವತೆ

ಕಾವ್ಯಾನಂದರ ಜೀವನ ದರ್ಶನ ಅಥವಾ ಕಾವ್ಯದ ದರ್ಶನ ಯಾವುದು ಎಂದು ಕೇಳಿದರೆ 'ಮಾನವ ಧರ್ಮ' ಎಂದು ಹೇಳಬಹುದು.

"ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು ನೀ ಬಯಸಿದಂತಾಗು
ಏನಾದರೂ ಸರಿಯೆ ಮೊದಲು ಮಾನವನಾಗು"

ಎಂಬುದು ಅವರ ಪ್ರಸಿದ್ಧವಾದ ಕವನ ಭಾಗಗಳಲ್ಲಿ ಒಂದು. ಅವರ ಒಂದು ಸಂಕಲನದ ಹೆಸರೇ 'ಮೊದಲು ಮಾನವನಾಗು' ಎಂದಿದೆ. ಮಾನವತೆ ಎಂಬುದು ದಾನವತೆ ಅಥವ ಪಶುತನದಿಂದ ಭಿನ್ನವಾದ ಸಂಸ್ಕಾರ ಪೂರ್ಣವಾದ, ಹೃದಯ ಪ್ರಧಾನವಾದ, ಮಾನವರೆಲ್ಲರಲ್ಲಿ ಭಾವೈಕ್ಯತೆಯನ್ನು ಅನುಭವಿಸುವ ಮನುಷ್ಯನ ಗುಣವಿಶೇಷ.

"ಹಸಿರಿಲ್ಲದಲ್ಲಿ ಹಸಿರು ಹುಟ್ಟಿಸುವುದು ಮಾನವ ಗುಣ
ಹಸಿರಿದ್ದಲ್ಲಿ ಮೆದ್ದು ಮಲಗುವುದು ಪಶುಗುಣವಯ್ಯ
ಕೆಟ್ಟದ್ದು ಸರಿಪಡಿಸುವುದು ಮಾನವ ಗುಣ
ಸರಿಯಿದ್ದುದನ್ನು ಕೆಡಿಸುವುದು ದಾನವ ಗುಣವಯ್ಯ"

ಎಂದು ಕಾವ್ಯಾನಂದರು ಮಾನವತೆಯನ್ನು ಪಶು-ರಾಕ್ಷಸ ಗುಣಗಳಿಂದ ಹೇಗೆ ಭಿನ್ನ ಎಂಬುದನ್ನು ವ್ಯಾಖ್ಯಾನಿಸಿದ್ದಾರೆ.

'ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡುವ' 'ಪ್ರೀತಿಸಿದವರನ್ನು ಪ್ರೀತಿಸುವ ಗುಣ' ಮಾನವ ಗುಣವಾದರೆ, 'ಒಳಿತು ಮಾಡದವರಿಗೂ ಒಳಿತು ಮಾಡುವ ಪ್ರೀತಿಸದವರನ್ನೂ ಪ್ರೀತಿಸುವ' ಗುಣ ಮಹಾಮಾನವತೆ. ಕೆಡುಕು ಮಾಡಿದವರಿಗೂ ಒಳಿತು ಮಾಡುವ; ದ್ವೇಷಿಸಿದವರನ್ನೂ ಪ್ರೀತಿಸುವ ಗುಣವು ದೇವ ಮಾನವತೆ. ಹೀಗೆ ಮಾನವಧರ್ಮದ ಅನೇಕ ಸ್ತರಗಳನ್ನು ಕವಿ ವಿವರಿಸಿದ್ದಾರೆ. ಈ ಉನ್ನತ ಹಂತಗಳು ಕೇವಲ ಭಾವುಕವಾದುವೇನಲ್ಲ. ಇಂಥ ಗುಣಗಳನ್ನು ತೋರಿಸಿದ ಮಹಾಪುರುಷರ ದೃಷ್ಟಾಂತಗಳು ನಮ್ಮ ದೇಶದ ಪರಂಪರೆಯಲ್ಲಿ ವಿಪುಲವಾಗಿ ಸಿಗುತ್ತವೆ. ಇಂಥ ಸತ್ ಪರಂಪರೆಯಲ್ಲಿ ಕಾವ್ಯಾನಂದರಿಗೆ ಅಪಾರ ಗೌರವವಿದೆ.



ಕಾವ್ಯಾನಂದರ ಮಾನವತೆಯು ಪಶುಸಹಜವಾದ ಸ್ವಾರ್ಥ, ಭೇದ, ಸಂಕುಚಿತ ಮನೋಭಾವಗಳನ್ನು ಮೀರಿ ನಿಂತ ಅನುಕಂಪ, ಪ್ರೀತಿ, ಸೌಜನ್ಯತೆ, ಸೇವೆ, ಪರೋಪಕಾರ, ತ್ಯಾಗ ಮುಂತಾದ ಮಾನವೀಯ ಗುಣಗಳ ಮೊತ್ತವಾಗಿದೆ. ಇದರಲ್ಲಿ ದುಡಿಯುವವರಿಗೆ, ಶೋಷಿತರಿಗೆ ಅತ್ಯಂತ ಹೆಚ್ಚಿನ ಪರಿಗಣನೆ ಇದೆ. ಮೌಢ್ಯಗಳಿಲ್ಲದ, ವೈಜ್ಞಾನಿಕ ನೆಲಗಟ್ಟಿನ ಅರಿವಿನ ದಾರಿ ಇದೆ. ಇಡೀ ವಿಶ್ವದ ಮಾನವರನ್ನೆಲ್ಲ ಒಂದೆಂದು ಭಾವಿಸುವ ವಿಶ್ವಕುಟುಂಬತ್ವವೂ ಇದೆ.

## ಸಮತಾ ತತ್ವ

ಸ್ವಾತಂತ್ರ್ಯೋತ್ತರ ಕಾಲದ ಕನ್ನಡ ಕವಿಗಳಲ್ಲಿ ಸಮತಾವಾದ ತತ್ವವನ್ನು ಭಾರತೀಯ ಹಿನ್ನೆಲೆಯಲ್ಲಿ ಕಾವ್ಯದ ಮೂಲಕ ಅಭಿವ್ಯಕ್ತ ಮಾಡಿರುವವರಲ್ಲಿ ಕಾವ್ಯಾನಂದರ ಸ್ಥಾನ ಬಹಳ ಮಹತ್ವವಾದುದು. ಪಾಶ್ಚಾತ್ಯರಿಂದ ನವ್ಯೋನವವಾದ ಅನೇಕ ವಾದಗಳನ್ನು ಆಮದು ಮಾಡಿಕೊಂಡ ನವ್ಯರು ಅದೇಕೋ ಮಾರ್ಕ್ಸ್‌ನ ಸಮತಾವಾದವನ್ನು ಮಾತ್ರ ಮೈಲಿಗೆಯಂತೆ ದೂರವಿಟ್ಟಿದ್ದರು. ಈ ವಾದವನ್ನು ಶರಣತತ್ವದೊಡನೆ ಕಸಿ ಮಾಡಿಕೊಂಡ ಕಾವ್ಯಾನಂದರು ಒಂದು ಸೈದ್ಧಾಂತಿಕವಾದ ಸ್ಪಷ್ಟ ಹಾಗೂ ದಿಟ್ಟ ಶ್ರದ್ಧೆಯನ್ನು ಬೆಳೆಸಿಕೊಂಡಿದ್ದರಿಂದಲೇ ಕೆಲವು ವರ್ಷಗಳು ಬೀಸಿದ ನವ್ಯದ ಕೆಟ್ಟಗಾಳಿಯಿಂದ ವಿಚಲಿತರಾಗದೆ ಉಳಿದರು. (ಮಾರ್ಕ್ಸ್‌ವಾದವನ್ನು ಸಮತಾವಾದವೆಂದು ಸ್ಥೂಲವಾಗಿ ಇಲ್ಲಿ ಬಳಸಲಾಗಿದೆ)

'ಬಿಂದು-ಸಿಂಧು' ಎಂಬ ಅವರ ಕವನ ಸಮಷ್ಟಿಗೆ ವ್ಯಷ್ಟಿಯು ಅಂಕಿತವಾಗಿರಬೇಕಾದ ಅನಿವಾರ್ಯತೆಯನ್ನು ತಿಳಿಸಿಕೊಡುತ್ತದೆ. ಸಮತಾವಾದ ವ್ಯಕ್ತಿವಾದಗಳ ಸಂಘರ್ಷವನ್ನೇ ಸಿಂಧು-ಬಿಂದುಗಳ ಸಂಭಾಷಣಾ ರೂಪವಾಗಿ ಕಾವ್ಯಾನಂದರು ವಿವರಿಸುತ್ತ ಸಮತಾವಾದವನ್ನು ಎತ್ತಿಹಿಡಿಯುತ್ತಾರೆ.

ಸಿಂಧುವು ಬಿಂದುವನ್ನು ಕರೆಯುತ್ತದೆ :

"ಬಾ ಬಿಂದು, ನನ್ನೊಳಗೆ ಬೆರೆತು ನನ್ನಂತಾಗು

ನಿನ್ನ ಅಲ್ಪತೆ ನಿನ್ನ ಕ್ಷಣಿಕತೆಯ ನೀಗು"
"ವ್ಯಕ್ತಿ ಜೀವನ ಪ್ರಿಯಾ,ವ್ಯಕ್ತಿವಾದಿಯೆ
ಮರೆವೆ ನಿನ್ನ ಗರ್ವವೇ ನಾನು ಎಂದು
ನಿತ್ಯ ನವ ಜೀವನವ ಪಡೆವೆ ನಿಜ ಆ ಜನ್ಮ
ನನ್ನದೇ ಒಂದು ಕಣ ನೆನಪಿರಲಿ ಬಿಂದು
ನಿನ್ನೊಳಿವೆ ನೂರಾರು ಜಲಕಣಗಳು ಕೂಡ
ವ್ಯಕ್ತಿತ್ವ ಬೇಡಿದರೆ ಉಳಿವೆಯಾ ಬಿಂದು
ವ್ಯಷ್ಟಿಯೆಂದೆಂದಿಗೂ ಸಮಷ್ಟಿಗಿಹುದಂಕಿತವು
ಪ್ರತ್ಯೇಕತೆಯೆ ಇಲ್ಲ ಪ್ರಕೃತಿಯೊಳು ಬಿಂದು" [೨೭]

ಸಮತಾ ತತ್ವವು ವೈಜ್ಞಾನಿಕ ತಳಹದಿಯನ್ನು ಹೊಂದಿದೆ, ಅದು ವಿಶ್ವನಿಯಮವೇ ಆಗಿದೆ ಎಂಬುದನ್ನು ಈ ಕವನ ಚೆನ್ನಾಗಿ ಬಿಂಬಿಸುತ್ತದೆ. ಮಾನವನ ಸಹಜ ಭವಿಷ್ಯವೇ ಇದಾಗಿದೆ.

ಇಲ್ಲಿಯವರೆಗಿನ ಸಮಾಜವು ಶೋಷಣೆಯ ಆಧಾರದ ಮೇಲೆ ಅವೈಜ್ಞಾನಿಕವಾಗಿ ಸಾಗಿ ಬಂದಿದೆ. ಪಿರಮಿಡ್ಡನ್ನು ತಲೆಕೆಳಗಾಗಿಟ್ಟಂತೆ ಅತಂತ್ರವಾದ ಸ್ಥಿತಿಯಲ್ಲೇ ಶೋಷಕವರ್ಗದ ಸ್ವಾರ್ಥ ಪ್ರಚಾರದಿಂದ ಅನೇಕ ಶತಮಾನಗಳು ಇಂಥ ಜನವಿರುದ್ಧ-ಸತ್ಯವಿರುದ್ಧ ವ್ಯವಸ್ಥೆಯು ನಡೆದು ಬಂದಿದೆ ಎಂಬುದನ್ನು ಕಾವ್ಯಾನಂದರು ಗುರುತಿಸಿದ್ದಾರೆ. ಈ ವ್ಯವಸ್ಥೆಯು 'ವಿದ್ಯೆಯನ್ನು ಮುಚ್ಚಿಟ್ಟು ಬಹುಜನ ಸಮಾಜವನ್ನು ವಿದ್ಯಾಹೀನರನ್ನಾಗಿಯೂ, ದುಡಿವವರನ್ನು ಅಡಿಗೊತ್ತಿ ಒತ್ತಿ ಅವರನ್ನು ಬಡವರನ್ನಾಗಿಯೂ, ಆದಿಜನರನ್ನೇ ದಲಿತರನ್ನಾಗಿಯೂ, ಸ್ತ್ರೀಯರನ್ನು ಅದುಮಿಟ್ಟು ಇಟ್ಟು ಅಸಹಾಯಕ ಅಬಲೆಯರನ್ನಾಗಿಯೂ ಮಾಡುತ್ತಾ ಬಂದಿದೆ, ಎಂದು ಅವರು ಒಂದು ವಚನದಲ್ಲಿ ವಿವರಿಸಿದ್ದಾರೆ.

ಆ ವ್ಯವಸ್ಥೆಯಲ್ಲಿ ಸಮಾಜಕ್ಕೆ ರಾಜ, ದೈವ, ಪುರೋಹಿತ, ಶ್ರೀಮಂತ ಇಂಥವರೇ ಮೂಲಾಧಾರ ಎಂಬಂತೆ ಜನರನ್ನು ನಂಬಿಸಲಾಗಿತ್ತು.

"ಇವರೆಲ್ಲರ ದಾರಿದ್ರ್ಯವ ಹೊತ್ತು ನಿಂತಿದೆ
ಕೆಲವೇ ಕೆಲವರ ಸಿರಿವಂತಿಕೆಯ ಸೌಧ......



ತಲೆಕೆಳಗಾದ ಪಿರಮಿಡ್ಡು ಈ ಸಮಾಜ
ಬಿರುಗಾಳಿಗೆ ಉರುಳಿ ಬೀಳುವ ಮುನ್ನ
ನಿಡು ಬುಡದ ಮೇಲೆ ನಿಲಿಸಯ್ಯ" [೨೮]

ತಲೆಕೆಳಗಾದ ಪಿರಮಿಡ್ಡಿನ ಹೋಲಿಕೆ ಮಾರ್ಕ್ಸನ ವರ್ಗಸಮಾಜದ ವಿಶ್ಲೇಷಣೆಯೇ ಆಗಿದೆ.

ಈ ವರ್ಗ ಸಮಾಜದಲ್ಲಿ ಶೋಷಕವರ್ಗವು ತಮ್ಮ ಹಿತಾಸಕ್ತಿಗಳನ್ನೇ ಕಾಪಾಡುವಂಥ ನೀತಿ. ಸಂಪ್ರದಾಯ, ತತ್ವ, ಸಾಹಿತ್ಯ, ಕಲೆಗಳನ್ನೆಲ್ಲ ಪೋಷಿಸಿಕೊಂಡು ಬಂದಿದೆ. ಇವಾವೂ ಕೆಳವರ್ಗದ ಜಾಗೃತಿ_ಕಲ್ಯಾಣ-ಸುಖಗಳನ್ನು ಎತ್ತಿ ಹಿಡಿಯುವಂಥವಾಗಿರಲಿಲ್ಲ. ಈ ಅಂಶವನ್ನು ಬಹಳ ಸೊಗಸಾಗಿ ಕಾವ್ಯಾನಂದರು ಹೀಗೆ ಹೇಳುತ್ತಾರೆ :

"ತೋಳ ನಿರ್ಧರಿಸಿದ ನೀತಿ
ಕುರಿಗೆ ವರವಾಗಬಲ್ಲುದೇನಯ್ಯ
ಹುಲಿ ಹಮ್ಮಿದ ರೀತಿ
ಹುಲ್ಲೆಗೆ ಹಿತಕರವಾಗಬಲ್ಲುದೇನಯ
ಬೆಕ್ಕು ನಟಿಸುವ ಪ್ರೀತಿ
ಇಲಿಗೆ ಅಪ್ಯಾಯನವಾಗುವುದೆಂತಯ್ಯ
ಹಾವು ಹೂಡಿದ ನಿಯತಿ
ಕಪ್ಪೆಗೆ ಕಲ್ಯಾಣಕರವಾದೀತೇನಯ್ಯ
ಕಟುಕ ರಚಿಸಿದ ಕಟ್ಟುಕಟ್ಟಳೆಗಳು
ಹಸುವಿಗೆ ಹಸಾದವೆನಿಸಬಹುದೇನಯ್ಯ
,... ಶೋಷಕರು ರಚಿಸಿದ ಶಾಸ್ತ್ರ-ಶಾಸನ-ಸಂವಿಧಾನಗಳು
ಶೋಷಿತರಿಗೆ ಸುಖವಬಲ್ಲುವೇನಯ್ಯ" [೨೯]

ಮಾರ್ಕ್ಸನ ಆದರ್ಶ ಸಮಾಜದಲ್ಲಿ ದುಡಿಯುವವರಿಗೆ ಅತ್ಯುನ್ನತ ಸ್ಥಾನ. ಅದು ಶ್ರಮಗೌರವ ಸಾರುವ, ವರ್ಗ ರಹಿತ, ಜಾತಿ ಮತ ದೈವ ರಹಿತ, ಶೋಷಣಾ ರಹಿತ ಸಮಾಜ. ಕಾವ್ಯಾನಂದರು 'ಗಿಡ ನೆಡುವ, ನಟ್ಟು ಕಡಿವ, ಜಲ್ಲಿ ಒಡೆವ, ಅಡುವ, ಕಸ ಹೊಡೆವ, ಶಸ್ತ್ರ ತೊಡುವ, ಅನ್ನ ವಿಡುವ,

ದುಡಿವ, ಕೊಡುವ ಕೈಗಳಿಗೆ ನಮೋ ನಮೋ' ಎಂದು ಈ ಅಂಶವನ್ನು ಎತ್ತಿ ಹಿಡಿಯುತ್ತಾರೆ.

''ಭಾಷಣ ಬಿಗಿವವರಿಗಿಂತ ಊರ ದಾರಿಯ ಮುಳ್ಳು ತೆಗೆವವರಿಗೆ, ಮೂರು ಹೊತ್ತೂ ಪೂಜೆ ಮಾಡುವವರಿಗಿಂತ ರೋಗಿಯ ಶುಶ್ರೂಷೆ ಮಾಡುವವರಿಗೆ, ಹಸಿ ಬಿಸಿ ಶಾಸನ ರಚಿಸುವ ಶಾಸಕರಿಗಿಂತ ಹಸಿದವರಿಗೆ, ಅನ್ನ ವಿಕ್ಕುವವರಿಗೆ, ಗುಡಿ ಮಠ ಕಟ್ಟಿಸುವವರಿಗಿಂತ ಗುಡಿಸಲು ಕೊಡುವವರಿಗೆ, ವೇದಾಗಮ ಭಾಷ್ಯ ಬರೆವವರಿಗಿಂತ ನಿರಕ್ಷರಿಗೆ ಅಕ್ಷರ ಕಲಿಸುವವರಿಗೆ ಕೈಮುಗಿಯುತ್ತೇನೆ"೩೦ ಎನ್ನುವ ಮಾತುಗಳಲ್ಲಿಯೂ ದೀನದಲಿತರ ಪರವಾದ ಮಾನವತೆಯನ್ನು ಶೋಷಕ ವರ್ಗದ ಜೊತೆಯಲ್ಲಿಟ್ಟು ವೈಷಮ್ಯವನ್ನು ತೋರಿಸಿ ಕೊಡುತ್ತಾರೆ. ತಮ್ಮ ಜನಸಾಮಾನ್ಯರ ಪಕ್ಷಪಾತವನ್ನು ಘೋಷಿಸುತ್ತಾರೆ.

ಸಮತಾವಾದವು ಯಾವಾಗಲೂ ಇಂದು-ನಾಳೆಗಳನ್ನು ಮುಖ್ಯವೆಂದು ತಿಳಿದುಕೊಂಡರೆ ಸಂಪ್ರದಾಯವಾದಿಗಳು ಭೂತಕಾಲಕ್ಕೆ ಪ್ರಾಧಾನ್ಯತೆ ಕೊಡುತ್ತಾರೆ. ಇಂದನ್ನು ಕೂಡ ಭೂತಗೊಳಿಸುತ್ತಾರೆ-ಯಾವಾಗಲೂ ಗತದಲ್ಲೇ ಅವರು ಬದುಕುತ್ತಿರುತ್ತಾರೆ. ಪೌರಾಣಿಕ ಪಾತ್ರಗಳು, ಕಟ್ಟುಕತೆಗಳು, ಪ್ರಾಚೀನಶಾಸ್ತ್ರ, ಆಗಮ ಸ್ಮೃತಿಗಳೇ ನಿಜವೆಂದು ನಂಬಿಕೊಂಡು ಈಗಲೂ ಬಾಳುತ್ತಾರೆ.

ಈ ಬಗ್ಗೆ ಕಾವ್ಯಾನಂದರು
"ಇಲ್ಲಿ ಆದ್ಯತೆ ಇರಬೇಕಾದುದು
ಈಗ ಬದುಕಿರುವವರಿಗೆ
ನಾಳೆ ಹುಟ್ಟುವವರಿಗಲ್ಲ
ನಿನ್ನೆ ಸತ್ತವರಿಗಲ್ಲ...
ನಿನ್ನೆ ಸತ್ತವರಿಗಾಗಿ ದುಂದು ವೆಚ್ಚ ಮಾಡುವವರು ಪೆಚ್ಚರು"

ಎಂದು ಅಂಥ ಜಡವಾದಿಗಳನ್ನು ಖಂಡಿಸಿದ್ದಾರೆ,



## ಸಾಮಾಜಿಕ ಕ್ರಾಂತಿ

ಸಮತಾವಾದದ ಗುರಿಯನ್ನು ಕಾರ್ಯರೂಪಕ್ಕಿಳಿಸುವುದೇ ಸಾಮಾಜಿಕ ಕ್ರಾಂತಿ ಎನಿಸಿಕೊಳ್ಳುತ್ತವೆ. ಶೋಷಿತರು ಜಾಗೃತರಾಗಿ ಶೋಷಕ ವರ್ಗದ ವಿರುದ್ಧ ಪ್ರತಿಭಟಿಸುವುದು. ಶೋಷಣೆಯನ್ನು ನಿರ್ಮೂಲನ ಮಾಡುವುದು ಹಾಗೂ ಶ್ರಮಜೀವಿಗಳ ಪ್ರಾಧಾನ್ಯತೆಯ ಸಮ ಸಮಾಜವನ್ನು ನಿರ್ಮಿಸುವ ಸಮಗ್ರ ಬದಲಾವಣೆಯನ್ನು ತರುವದು ಇವೆಲ್ಲ ಸಾಮಾಜಿಕ ಕ್ರಾಂತಿಯಲ್ಲಿ ಬರುತ್ತವೆ. ಕ್ರಾಂತಿಯು ಜನಸಾಮಾನ್ಯರಲ್ಲಿ ಅದರಲ್ಲೂ ಅತ್ಯಂತ ಹೆಚ್ಚಿನ ಶೋಷಣೆಗೆ ಒಳಗಾದವರಲ್ಲಿ ಪ್ರಾರಂಭವಾಗಬೇಕಾಗುತ್ತದೆ.

ದಲಿತರ ಕ್ರಾಂತಿಯು ಬರುತ್ತದೆಂದು ಕಾವ್ಯಾನಂದರು ದಲಿತ ಕಾವ್ಯ ಚಳುವಳಿಯು ಮೂಡುವ ಕೆಲವು ದಶಕಗಳ ಮುನ್ನವೇ 'ದಲಿತ ಡಮರವನ್ನು' ಬಾರಿಸಿದ್ದರು. ಕವಿಯು ಕ್ರಾಂತದರ್ಶಿ ಎಂಬ ಮಾತು ಅವರಿಗೆ ಚನ್ನಾಗಿ ಅನ್ವಯವಾಗುತ್ತದೆ.

"ಭಂ ಭಂ ಭಂ - - ದಲಿತ ಡಮರು ನಾದ
ಕ್ರಾಂತಿ ಭೈರವನ ಕರಾಳ ಡಮರು ನಾದ
ಧರ್ಮದ ಬೊಂತೆ
ಕರ್ಮದ ಕಂತೆ
ವಿಕೃತ ವರ್ಣವಾದ
ಸೊಮ್ಮಿನ ಹಾವಳಿ
ಸುಲಿಗೆಯ ದಾಳಿ
ಉಚ್ಚ ನೀಚ ಭೇದ
ಮಣ್ಣು ಮುಕ್ಕುತಿವೆ
ರಕ್ತ ಕಕ್ಕುತಿವೆ
ಉಳಿಸವಿನ್ನು ವೇದ"೩೧

ಈ ಭವಿಷ್ಯ ಸಮಾಜ ನಿರ್ಮಾಣಕ್ಕೆ ಶೋಷಿತರಲ್ಲೇ ಜಾಗೃತಿ ಮೂಡಬೇಕಾದುದು ಅನಿವಾರ್ಯ. 'ಬಡವರಿಗೆ ಬಡವರೇ ರಕ್ಷೆ' 'ಹೊಸ ಲೋಕವ ಕಟ್ಟುವ ಹೊಣೆ ಅವನದು' ಎಂದು ಮುಂತಾಗಿ ಜಾಗೃತೀಕರಣಕ್ಕಾಗಿ ಪ್ರಯತ್ನಿಸಿದ್ದಾರೆ.

"ಶೋಷಿತರೆ ದುರ್ಬಲರೆ ದಲಿತರೆ
ದಂಗೆ ಏಳಿರಿ ದಂಗೆ ಏಳಿರಿ
ಢೋಂಗಿ ಗುರುಗಳ ವಿರುದ್ಧ...
ಢಕ್ಕುಳಿ ದೇಶ ಭಕ್ತರ ವಿರುದ್ಧ...
ನಿಮ್ಮ ನೆತ್ತರಿನ ಜಿಗಣೆಗಳ ವಿರುದ್ಧ
ಸಕಲ ಸುಲಿಗೆಗಾರರ ವಿರುದ್ಧ"

ಎಂಬ ಅವರ ಕ್ರಾಂತಿ ಬೋಧನೆಯು ವಾಚ್ಯವಾಗಿದೆಯಾದರೂ ಇಂದು ಸಮಾಜಕ್ಕೆ ಅತ್ಯಾವಶ್ಯಕವಾಗಿದೆ.

"ಗುಡಿಸಲುಗಳಿಗೆ ಬಾಯಿ ಬಂದಿದೆ ಈಗ ಅನ್ಯಾಯದ ಬಾಯಿ
ಮುಚ್ಚಲೇಬೇಕು
ಕುರಿಗಳಿಗೂ ಶಕ್ತಿ ಬಂದಿದೆ... ತೋಳಗಳು ಅಡಗಲೇಬೇಕಿನ್ನು"

"ಎಲ್ಲ ಬಡವರ ಸಂಘಟನೆಯಲ್ಲಿಯೇ ಬಡವರ ಶಕ್ತಿ-ಮುಕ್ತಿಗಳಿವೆ" ಎಂದು ಕವಿಯು ಆಶಯವನ್ನೂ ಶೋಷಿತರ ಆತ್ಮವಿಶ್ವಾಸವನ್ನೂ ಸೂಚಿಸಿದ್ದಾರೆ.

'ಹೇಗೋ ಸಾಯುತ್ತಿದ್ದವರು ಹೀಗೆ ಸಾಯುವುದು ಲೇಸಲ್ಲವೇ' ಎಂದು ಹೋರಾಟದ ವೀರ ಮರಣವನ್ನು ಎತ್ತಿ ಹಿಡಿಯುವುದರ ಮೂಲಕ ಬಂಡಾಯದ ಕಹಳೆಯನ್ನು ಮೊಳಗಿಸಿದ್ದಾರೆ.

ಈ ಗುರಿ ಮುಟ್ಟುವ ದಾರಿ ಬಹು ಉದ್ದವಿದೆ. ಈಗಿರುವ ಪ್ರಜಾ ಪ್ರಭುತ್ವ ವ್ಯವಸ್ಥೆಯ ಮೂಲಕವೇ ಆ ಗುರಿ ತಲುಪಲು ಸಾಧ್ಯ ಎಂಬ ವಿಶ್ವಾಸ ಅವರದು. ಇಂದಿನ ಸರ್ಕಾರದ ಯೋಜನೆ. ಕಾರ್ಯಾಚರಣೆಗಳಿಗೆ ಮಾರ್ಗದರ್ಶಕ ಸೂತ್ರವನ್ನೂ ಅವರು ಒದಗಿಸುತ್ತಾರೆ - ಹಳ್ಳಿಗರಿಗೆಲ್ಲ ಮನೆ, ಆಸ್ಪತ್ರೆಗಳಾಗುವವರೆಗೆ ಪಟ್ಟಣಿಗರ ಮಹಡಿ-ಭವನ ಇತ್ಯಾದಿಗಳಿಗೆ ಬ್ರೇಕು ಹಾಕಿರಿ, ಅಂತ್ಯೋದಯ ಕೈಗೂಡುವವರೆಗೆ ಶ್ರೇಷ್ಠೋದಯದ ಸೊಲ್ಲು ನಿಲ್ಲಿಸಿರಿ ಎಂದು.

ಆದರೆ ಇವನ್ನು ಮಾಡುವವರು ಯಾರು ? ಧನಿಕರ ಕೈ ಗೊಂಬೆಯಾಗಿರುವ, ಧನದ ಆಧಾರದ ಮೇಲೆ ನಿರ್ಮಿತವಾಗುವ ಸರ್ಕಾರವು ಜನಪರವಾದ



ಕ್ರಾಂತಿಯ ಬದಲಾವಣೆಗಳನ್ನು ಸಮಗ್ರವಾಗಿ ಎಷ್ಟರ ಮಟ್ಟಿಗೆ ತರಲು ಪ್ರಯತ್ನಿಸೀತು ? ಎಂಬುದು ಅನುಮಾನ. ಆದರೂ ಉದಾರ ಮಾನವತಾವಾದಿಗಳಾದ ಕಾವ್ಯಾನಂದರು ಮನಪರಿವರ್ತನೆಯ ಮೂಲಕ ಬದಲಾವಣೆ ಸಾಧ್ಯವೆಂದು ಆಶಿಸುತ್ತಾರೆ.

ಒಟ್ಟಿನಲ್ಲಿ ಕಾವ್ಯಾನಂದರು ನವ್ಯರ ಶುದ್ಧ ಕಾವ್ಯದ ದೃಷ್ಟಿಯಿಂದ ಕಾವ್ಯಕಲೆಯಲ್ಲಿ ಕಸರತ್ತು ಮಾಡುವವರಲ್ಲ. ಕಾವ್ಯಕ್ಕಾಗಿ ಕಾವ್ಯ ಎಂಬುದು ಅವರ ದಾರಿಯಲ್ಲ. ಕಾವ್ಯದ ಆನಂದವೇ ಅವರ ಗುರಿಯಲ್ಲ. ಸಮಾಜಕ್ಕಾಗಿ ಅದರ ಸಮಗ್ರ ಕಲ್ಯಾಣಕ್ಕಾಗಿ. ಶೋಷಣಾರಹಿತ ಸಮಾಜಕ್ಕಾಗಿ ಅವರು ಕಾವ್ಯವನ್ನು ಬಳಸಿದ್ದಾರೆ. ಸಾಮಾಜಿಕ ಪ್ರಜ್ಞೆಯು ಅವರ ವಿಶಿಷ್ಟ ಮನೋಧರ್ಮ.

"If a new society is to be built up it can be built up only bv the contributions of first rate creative artists" ಎಂಬ ರಾಧಾಕೃಷ್ಣನ್ನರ ಮಾತಿನಂತೆ ನವಸಮಾಜ ನಿರ್ಮಾಣಕ್ಕೆ ಕಣ ಕಣವೂ ದುಡಿಯುತ್ತಿರುವ ಕಾವ್ಯಾನಂದರು ನಿಜಕ್ಕೂ ಪ್ರಥಮ ದರ್ಜೆಯ ಕವಿ, ಜನಕವಿ, ರಾಷ್ಟ್ರಕವಿ ಎಂದು ಹೇಳುವುದರಲ್ಲಿ ಅನುಮಾನವಿಲ್ಲ. ಕವಿಗಳು ಸಮಾಜದ ದೀಪಧಾರಿಗಳು ಎಂಬ ಮಾತು ಇಂಥ ಕವಿಯ ಮಾತುಗಳಿಗೆ ಜನ ಕಿವಿ ಕೊಟ್ಟಾಗ ಸಾರ್ಥಕವಾಗುತ್ತದೆ.

●

## ಟಿಪ್ಪಣಿಗಳು

೧ ಜಲಪಾತ (೧೯೫೩) ಮುನ್ನುಡಿ.
೨ ಚೆ. ಕಣವಿ—'ವಚನೋದ್ಯಾನದ ವೈಶಿಷ್ಟ್ಯ'-ಕಾವ್ಯಾನಂದ (ಪು-೩೮೯)
೩ ಚೆ. ಕಣವಿ—'ವಚನೋದ್ಯಾನದ ವೈಶಿಷ್ಟ್ಯ'-ಕಾವ್ಯಾನಂದ (ಪು-೩೮೮)
೪ ಬಿ. ಎ. ಸನದಿ—ಜನಕಾವ್ಯದೃಷ್ಟಿ (ಪು-೮೦)
೫ 'ಜಮಾ ಖರ್ಚು'-ಮಾನಸ ಸರೋವರ—ಕಾವ್ಯಾನಂದರ ಆಯ್ದ ಕವನಗಳು (ಪು-೧೮೯)

೬ 'ಮಾನವ ಸಮಾಜ'—ಜಲಪಾತ—ಕಾ. ಆ. ಕ. (ಪು-೪)
೭ 'ಕುರುಡಿ'—ಮೊದಲು ಮಾನವನಾಗು—ಕಾ. ಆ. ಕ. (ಪು-೨೭೫)
೮ 'ಮನದ ಮಸಣ'—ಕಾ. ಆ. ಕ. (ಪು-೧೯೬)
೯ ವಚನ ನಂದನ—(ಪು-೧೬೨)
೧೦ ವಚನ ನಂದನ—(ಪು-೨೦೮)
೧೧ ವಚನ ನಂದನ—(ಪು-೧೭೧)
೧೨ ಕಲ್ಲೋಲ ಮಾಲೆ—(ಪು-೫೪)
೧೩ ಕಲ್ಲೋಲ ಮಾಲೆ—(ಪು-೫೪)
೧೪ 'ಏನಾರ ಕಲೀಬೇಕಂತೀಯಾ'—ಕಾ. ಆ. ಕ. (ಪು-೩೦೦)
೧೫ ವಚನ ನಂದನ—(ಪು-೧೫೬)
೧೬ 'ಜೀರ್ಣೋದ್ಧಾರ'—ಕಾ. ಆ. ಕ. (ಪು-೭೯)
೧೭ 'ಉಗ್ರಾಣ'—ಕಾ. ಆ. ಕ. (ಪು-೨೯)
೧೮ 'ಮರಗೂಳುಣಿ'-ಮೊದಲು ಮಾನವನಾಗು—ಕಾ. ಆ.ಕ. (ಪು-೨೪೫)
೧೯ 'ನಾಯಿ ಜಗಳ'—ಕಾ. ಆ. ಕ. (ಪು-೩೧೩)
೨೦ ಎಣ್ಣೆ ಮಜ್ಜನ—ಕಾ. ಆ. ಕ. (ಪು-೨೬೨)
೨೧ ಬದುಕಗೊಡಿರಿ—ಕಾ. ಆ. ಕ. (ಪು-೨೭೪)
೨೨ ವಚನ ನಂದನ—(ಪು-೧೬೮)
೨೩ ವಚನ ನಂದನ—(ಪು-೧೯೮)
೨೪ 'ನಿನ್ನಿರವೆ ನರಕ ಬಡವ'—ಕಾ. ಆ. ಕ. (ಪು-೧೧೦
೨೫ ಕಲ್ಲೋಲ ಮಾಲೆ—(ಪು-೩೬)
೨೬ ಜನಜೀವನ ಜಾಹ್ನವಿಗೆ—ಕಾ. ಆ. ಕ. (ಪು-೩೯)
೨೭ ಬಿಂದು-ಸಿಂಧು—ಕಾ. ಆ. ಕ. (ಪು-೨೪-೨೬)
೨೮ ವಚನೋದ್ಯಾನ—(ಪು-೧೬೯)
೨೯ ವಚನೋದ್ಯಾನ—(ಪು-೧೭೪)
೩೦ ವಚನೋದ್ಯಾನ—(ಪು-೧೭೦)
೩೧ ದಲಿತ ಡಮರು—ಕಾ. ಆ. ಕ. (ಪು-೩೦೮-೩೧೦)